ISSN 2347-9744

# कर्नाटकसंस्कृतविश्वविद्यालयः
## ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯಃ–ವಾರ್ತಾಪತ್ರಮ್

ಕನ್ನಡ–ಸಂಸ್ಕೃತ ತ್ರೈಮಾಸಿಕ ಪತ್ರಿಕೆ ಸಂಪುಟ: 08 ಸಂಚಿಕೆ: 12 ಆಗಸ್ಟ್ 2022 – ಏಪ್ರಿಲ್ 2023 ಬೆಲೆ: ರೂ.20

# वार्तापत्रम्



ಕುಲಪತಿ
ಡಾ. ಎಸ್. ಅಹಲ್ಯಾ
ಸಂಪಾದಕರು
ಡಾ. ಗೋವಿಂದ ಬಿ.
ಸಹ ಸಂಪಾದಕರು
ಡಾ. ಮಲ್ಲನಗೌಡ ಎಸ್.
ಸಂಪಾದಕ ಸಲಹಾ ಮಂಡಳಿ
ಪ್ರೊ. ವೀರನಾರಾಯಣ ಎನ್.ಕೆ. ಪಾಂಡುರಂಗಿ
ಶ್ರೀ ಕೆ.ಎಲ್. ರಾಜಶೇಖರ್

ಖಾಸಗಿ ಪ್ರಸಾರಕ್ಕಾಗಿ










# कुलपतिवचनम्

महदिदं प्रमोदस्थानं यत् गतसंवत्सरीणवृत्तान्तसंग्राहकं वार्तापत्रमिदं सिद्धमिति। विश्वविद्यालयेनानेन या प्रगतिः साधिता सा अस्मिन् सम्यगुल्लिखिता। विश्वविद्यालयेन यदौन्नत्यं प्राप्तव्यं तद्दूरस्थमपि प्रत्यक्षमेव। संस्कृतं न केवलमेका भाषा अपितु वेदशास्त्रायुर्वेदादिनानाविषयाणां निरूपकमिति विदितं विपश्चिताम्। तस्यास्य ज्ञानराशेः आधुनिककालोपयोगिताविष्करणमेव विश्वविद्यालयस्य कार्यमस्ति। वेदादिशास्त्राणाम् यद्गाम्भीर्यमस्ति तदितोपि सम्यवगंतव्यमस्ति। तदर्थं विश्वविद्यालयोयं निरन्तरं प्रयासशीलोस्ति।

शीघ्रमेव राष्ट्रियमूल्याङ्कप्रत्यायनपरिषदः मूल्याङ्कनेन विश्वविद्यालयोयं नितरां सर्वविधां प्रगतिं लभेतेति विश्वसिमः।

सर्वेपि विश्वविद्यालयीयाः कर्मचारिणः तदर्थं प्रयासशीलाः सन्ति। तदर्थं सर्वे ते अभिनन्द्यन्ते। विशिष्य वार्तापत्रस्य निर्माणे कृतोद्योगाः प्रसाराङ्गस्य उपनिर्देशकः डा गोविन्दः इत्यादयः साधुवादैर्योज्यन्ते।

**डा. अहल्या**



# ಸಂಪಾದಕೀಯ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಳೆದ 12 ವರ್ಷಗಳಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ–ಸಂಸ್ಕೃತ–ತ್ರೈಮಾಸಿಕ ವಾರ್ತಾಪತ್ರವನ್ನು ಹೊರತರಲಾಗುತ್ತಿದೆ. ಪ್ರಸ್ತುತ ಹೊರತರುತ್ತಿರುವ ಸಂಚಿಕೆಯು ವಿಶ್ವವಿದ್ಯಾಲಯ ಮತ್ತು ಸಂಬಂಧಿಸಿದ ಸಂಶೋಧನಾ ಸಂಸ್ಥೆಗಳು, ಅಧೀನ ಅನುದಾನಿತ, ಅನುದಾನ ರಹಿತ ಸಂಸ್ಕೃತ ಕಾಲೇಜುಗಳು, ಹಾಗೂ ಪಾಠಶಾಲೆಗಳು, ಇನ್ನಿತರ ಸಂಬಂಧಿಸಿದ ಸಂಸ್ಥೆಗಳಲ್ಲಿ ನಡೆದ ಸಮಗ್ರ ಚಿತ್ರಣವನ್ನು ನೀಡಬಲ್ಲ ಒಂದು ಕಿರುಗನ್ನಡಿಯಾಗಿದೆ. ಈ ಸಂಚಿಕೆಯ ವಾರ್ತಾಪತ್ರವು ಆಗಸ್ಟ್ ಒಂದು 2022ರ ನಂತರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಮತ್ತು ಸಂಬಂಧಿಸಿದ ಅಧೀನ ಅನುದಾನಿತ, ಅನುದಾನ ರಹಿತ ಸಂಸ್ಕೃತ ಕಾಲೇಜು, ಸಂಸ್ಕೃತ ಪಾಠಶಾಲೆಗಳು ಇತರೆ ಸಂಶೋಧನಾ ಸಂಸ್ಥೆಗಳಲ್ಲಿ ನಡೆದ ಅನೇಕ ಕಾರ್ಯಕ್ರಮಗಳನ್ನೊಳಗೊಂಡತಹ ಹಾಗೂ ಸ್ನಾತಕ ಪೂರ್ವ ದೀಕ್ಷಾಂತ ಸಮಾರೋಹ ಮತ್ತು ಸಂಸ್ಕೃತ ಸಪ್ತಾಹ ಹಾಗೂ ಕಸಂವಿಯಲ್ಲಿ ಸರಸ್ವತಿ ಮೂರ್ತಿಯ ಪ್ರತಿಷ್ಠಾಪನೆಯ ವಿಶೇಷ ಸಂಚಿಕೆಯಾಗಿ ಇದನ್ನು ಹೊರತರಲು ಬಹಳ ಸಂತೋಷವಾಗುತ್ತಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದ ಮಾಹಿತಿಯು ಸರ್ವರಿಗೂ ತಲುಪಲಿ ಎನ್ನುವ ದೃಷ್ಠಿಯಿಂದ ಕಾರ್ಯಕ್ರಮಗಳ ವರದಿಗಳನ್ನು ಭಾವಚಿತ್ರಗಳೊಂದಿಗೆ ವಿವರಿಸಲಾಗಿದೆ. ನೂತನ ಕುಲಪತಿಗಳ ಪದಗ್ರಹಣ ಕಾರ್ಯಕ್ರಮ ಹಾಗೂ 60ನೇ ಅಖಿಲ ಭಾರತೀಯ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ವಿಜಯಿಗಳಾದ ವಿಜಯವೈಜಯಂತೀ ಪುರಸ್ಕೃತ ವಿದ್ಯಾರ್ಥಿಗಳಿಗೆ ಅಭಿನಂದನೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ.

ಕಸಂವಿಯಲ್ಲಿ ಶ್ರೀರಾಮನವಮಿ ಆಚರಣೆ, ಮಹಿಳಾ ದಿನಾಚರಣೆ, ಕಸಂವಿಯಲ್ಲಿ ಸಂವಿಧಾನ ದಿನಾಚರಣೆ, ಸೋಂದಾ ಸ್ವರ್ಣವಲ್ಲಿಯಲ್ಲಿ ರಾಜ್ಯಮಟ್ಟದ ಸಂಸ್ಕೃತೋತ್ಸವ, ರಾಜ್ಯಮಟ್ಟದ ಶಾಸ್ತ್ರೀಯ ಸ್ಪರ್ಧೆಗಳು ಹಾಗೂ ಕಸಂವಿಯ ನೂತನ ಜಾಲಪುಟ ಲೋಕಾರ್ಪಣೆ, "ಸೀಕ್ರೇಟ್ ಆಫ್ ಕಾರಕ ಇನ್ ಭಟ್ಟಿಕಾವ್ಯ" ವಿಷಯದಲ್ಲಿ ವಿಶೇಷೋಪನ್ಯಾಸ, ಕಸಂವಿಯಲ್ಲಿ 74ನೇ ಗಣರಾಜ್ಯೋತ್ಸವಾಚರಣೆ, ಕಸಂವಿಯಲ್ಲಿ ರಥಸಪ್ತಮಿಯ ನಿಮಿತ್ತ ಸಾಮೂಹಿಕ ಸೂರ್ಯನಮಸ್ಕಾರ, ಸುರತ್ಕಲ್‌ನ ಶ್ರೀನಿವಾಸ ವಿಶ್ವವಿದ್ಯಾಲಯದಲ್ಲಿ ವಿಶ್ವಸಂಸ್ಕೃತ ಸಮ್ಮೇಳನ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, 136ನೇ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ, ಮತದಾನದ ಜಾಗೃತಿಯ ಜಾಥಾ ಕಾರ್ಯಕ್ರಮ, ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ರಕ್ತದಾನ ಶಿಬಿರ. ಯೋಗವಿದ್ಯಾರ್ಥಿಗಳಿಂದ ಕ್ರೀಡೆ ಇತ್ಯಾದಿ ಕಾರ್ಯಕ್ರಮಗಳ ಸಂಬಂಧಪಟ್ಟ ವರದಿಗಳನ್ನು ಚಿತ್ರಸಹಿತವಾಗಿ ಈ ಸಂಚಿಕೆಯಲ್ಲಿ ಮುದ್ರಿಸಲಾಗಿದೆ.

**ಡಾ. ಗೋವಿಂದ**
**ಉಪ ನಿರ್ದೇಶಕರು**

# ಕಸಂವಿಯ ನೂತನ ಕುಲಪತಿಗಳಾಗಿ ಡಾ॥ ಅಹಲ್ಯಾರವರು ಪದಗ್ರಹಣ ಮಾಡಿದರು.

**ವಿದ್ವಾನ್ ಹೇಮರಾಜ. ಎನ್. ಎಸ್**
ಸಂಶೋಧನಾ ಸಹಾಯಕರು



ನೂತನವಾಗಿ ಕರ್ನಾಟಕ ಸರ್ಕಾರದಿಂದ ನಿಯೋಜಿಸಲ್ಪಟ್ಟ ಮಾನ್ಯ ಕುಲಪತಿಗಳು ದಿನಾಂಕ17.03.3023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ **ಡಾ. ಅಹಲ್ಯರವರು** ಪದಗ್ರಹಣ ಮಾಡಿದರು. ಈ ಸಂದರ್ಭದಲ್ಲಿ ಕುಲಪತಿಗಳ ಸ್ಥಾನದಿಂದ ನಿರ್ಗಮಿಸಿದ ಭಾಷಾ ನಿಕಾಯದ ಪ್ರಾಧ್ಯಾಪಕರಾದ **ಪ್ರೊ. ಗಿರೀಶ್‌ಚಂದ್ರರವರು** ಉಪಸ್ಥಿತರಿದ್ದರು. ಕುಲಸಚಿವರಾದ ಪ್ರೊ. ಪಾಲಯ್ಯರವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕಸಂವಿಯ ನೂತನವಾಗಿ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡು ಮಾತನಾಡುತ್ತಾ ನಾನು ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದೆ ಹಾಗಾಗಿ ಆಯುರ್ವೇದಕ್ಕೂ ಸಂಸ್ಕೃತಕ್ಕೂ ಅವಿನಾಭಾವ ಸಂಬಂಧವಿರುವಂಥದ್ದಾಗಿದೆ. ಆದ್ದರಿಂದ **ವೇದಗಳ ಉಪವೇದವಾಗಿದೆ** ಆಯುರ್ವೇದ ಎನ್ನುವಂಥದ್ದು. ಸಂಸ್ಕೃತದ ಸೇವೆ ಮಾಡುವಂಥಹ ಭಾಗ್ಯ ದೊರಕಿರುವುದು ಬಹಳ ಸಂತೋಷದ ವಿಚಾರ. ಹಿಂದೆ ಆಯುರ್ವೇದ ವೈದ್ಯರು ಸೂಚಿಸಿದ ಕಷಾಯ, ಆಮ್ಲ ಇತ್ಯಾದಿಗಳನ್ನು ಸೇವಿಸಲು ಹಿಂಜರಿಯುತ್ತಿದ್ದರು ರೋಗಿಗಳು. ಇದೀಗ ಪಥ್ಯವಾಗುವ ಕಷಾಯ ಮುಂತಾದ ಔಷಧಿಗಳನ್ನೇ ನೀಡಿ ಎಂದು ರೋಗಿಗಳು ಆಯುರ್ವೇದ ಆಸ್ಪತ್ರೆಗಳಿಗೆ ಬರುತ್ತಾರೆ. ಆಯುರ್ವೇದದ ಮಹತ್ವ ಈಗ ಅರ್ಥವಾಗಿದೆ ಎಂದು ಆರೋಗ್ಯದ ಸ್ವಾಸ್ಥ್ಯದ ಬಗ್ಗೆ ಹೇಳಿದರು. ಹಾಗೆ ಮುಂದುವರೆಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಅನೇಕ ಕುಲಪತಿಗಳು ಅಭಿವೃದ್ಧಿಯನ್ನು ಪಡಿಸಿದ್ದಾರೆ ಹಾಗೆಯೇ ನೀವೆಲ್ಲರೂ ನನಗೆ ಸಹಕರಿಸಿ ನಾವೆಲ್ಲರೂ ಸೇರಿ ವಿಶ್ವವಿದ್ಯಾಲಯವನ್ನು ಅಭಿವೃದ್ಧಿಪಡಿಸೋಣ ಎಂದರು.



ನಿರ್ಗಮಿತ ಕುಲಪತಿಗಳಾದ **ಪ್ರೊ. ಗಿರೀಶ್‌ಚಂದ್ರರವರು** ಮಾತನಾಡುತ್ತಾ ಡಾ. ಅಹಲ್ಯರವರು ಇಂದು ನೂತನವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ ಅವರಿಗೆ ಹಾರ್ದಿಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ ಎಂದರು. ಡಾ. ಅಹಲ್ಯರವರ ಬಗ್ಗೆ ಮಾತನಾಡುತ್ತಾ ಇವರು **ಸರ್ಕಾರಿ ಆಯುರ್ವೇದ ಕಾಲೇಜಿನ** ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಇವರು ಅಕ್ಕ ಎಂದೇ ಪ್ರಸಿದ್ಧರು. ಇವರನ್ನು ಎಲ್ಲರೂ ಕೂಡ ಅಕ್ಕ ಎಂದೇ ಪ್ರೀತಿಯಿಂದ ಕರೆಯುವುದುಂಟು. ಹಾಗೆಯೇ ಅಲ್ಲಿಯ ಪ್ರಾಧ್ಯಾಪಕರು ಬೋಧನೆಯ ಜೊತೆಗೆ ರೋಗಿಗಳಿಗೆ ಚಿಕಿತ್ಸೆಯನ್ನು ಕೂಡ ನೀಡಬೇಕು. ಆ ರೀತಿಯಾದ ವ್ಯವಸ್ಥೆಯನ್ನು ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿ ಮೇಡಂರವರು ಮಾಡಿದ್ದಾರೆ ಇದರಿಂದ ಅನೇಕ ರೋಗಿಗಳಿಗೆ ಪ್ರಯೋಜನವಾಗಿದೆ ಎಂದರು. ಮುಂದುವರೆದು ಮಾನ್ಯ ಡಾ. ಅಹಲ್ಯರವರು ಅನೇಕ ವಿಧವಾದ ಯೋಜನೆಗಳನ್ನು ರೂಪಿಸಿ ಆಯುರ್ವೇದ ಕಾಲೇಜನ್ನು ಅಭಿವೃದ್ಧಿಪಡಿಸಿದ್ದಾರೆ. ಆಯುಷ್ ಇಲಾಖೆಯಲ್ಲಿ ಸಹಾಯಕ ಜಂಟಿ ನಿರ್ದೇಶಕಾರಾಗಿ ಕೆಲಸವನ್ನು ಮಾಡಿದ್ದಾರೆ ಹಾಗೆಯೇ ಉಪಕುಲಸಚಿವರಾಗಿಯೂ ಕೆಲಸವನ್ನು ನಿರ್ವಹಿಸಿದ್ದಾರೆ ಎಂದರು.



ಕುಲಸಚಿವರಾದ **ಪ್ರೊ. ಪಾಲಯ್ಯರವರು** ಮಾತನಾಡುತ್ತಾ ಡಾ. ಅಹಲ್ಯ ಮೇಡಂರವರು ನೂತನವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದು ಬಹಳ ಸಂತೋಷದ ವಿಚಾರ. ಮೇಡಂರವರು ಸರ್ಕಾರಿ ಆಯುರ್ವೇದಿಕ್ ಕಾಲೇಜಿನ ಪ್ರಾಚಾರ್ಯರಾಗಿದ್ದಾಗ ಅನೇಕ ಕಾರ್ಯಗಳನ್ನು ರೂಪಿಸಿ ಕಾಲೇಜನ್ನು ಅಭಿವೃದ್ಧಿ ಪಡಿಸಿದ್ದಾರೆ. ಹಾಗೆಯೇ ನಮ್ಮ ವಿಶ್ವವಿದ್ಯಾಲಯವನ್ನು ಕೂಡ ಅಭಿವೃದ್ಧಿಯನ್ನು ಮಾಡಲಿ ಎಂದು ಹಾರೈಸಿದರು. ಮುಂದುವರೆಸುತ್ತಾ ವೈದ್ಯರೊಬ್ಬರು ಕುಲಪತಿಗಳಾಗಿ ನಮ್ಮ ವಿಶ್ವವಿದ್ಯಾಲಯಕ್ಕೆ ಆಗಮಿಸಿರುವುದು ಬಹಳ ಅನುಕೂಲವಾಗಿರುವಂಥದ್ದು ಎಂದು ನುಡಿದರು.

ಪರೀಕ್ಷಾ ನಿಯಂತ್ರಕರು ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಕ್ಷರೂ ಆದ **ಡಾ. ರಾಮಕೃಷ್ಣ ಭಟ್ಟರವರು** ಅತ್ಯುತ್ತಮವಾಗಿ ಹಾಗೂ ಅಚ್ಚುಕಟ್ಟಾಗಿ ನಿರೂಪಣೆಯನ್ನು ಮಾಡಿದರು. ಕರ್ನಾಟಕ ಸಂಸ್ಕೃತ ಸಂಶೋಧನಾ ಸಂಸತ್ ಮೇಲುಕೋಟೆ, ಇದರ ಭೂತಪೂರ್ವನಿರ್ದೇಶಕರಾದ ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ. ವಿನಾಯಕ ನಾಮಣ್ಣವರವರು** ಬಹಳ ವಿಶಿಷ್ಟವಾಗಿ ವಂದನಾರ್ಪಣೆಯನ್ನು ಮಾಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ ಸಂಘದ ವತಿಯಿಂದ ಮಾನ್ಯ ಕುಲಪತಿಗಳನ್ನು ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ ಕಸಂವಿಯ **ಎಲ್ಲಾ ವಿಭಾಗದ ಪ್ರಾಧ್ಯಾಪಕರು ಉಪಸ್ಥಿತರಿದ್ದರು.** ಎಲ್ಲಾ ಸಂಶೋಧನಾ ಸಹಾಯಕರು ಉಪಸ್ಥಿತರಿದ್ದರು. ಹಾಗೆಯೇ ಎಲ್ಲಾ **ಬೋಧಕೇತರ ನೌಕರರು ಭಾಗವಹಿಸಿದ್ದರು.** ಕಾರ್ಯಕ್ರಮವು ಶಾಂತಿಮಂತ್ರದೊಂದಿಗೆ ಸಮಾಪ್ತಿಯಾಯಿತು.

# ಕಸಂವಿಯಲ್ಲಿ ಭಕ್ತಿ, ಭಾವಗಳಿಂದ ಶ್ರೀರಾಮನವಮಿಯ ಪರ್ವಾಚರಣೆ

**ವಿದುಷಿ ಸಾವಿತ್ರಿ ಪೂಜಾರಿ**
**ಸಂಶೋಧನಾ ಸಹಾಯಕರು**



ದಿನಾಂಕ:30.03.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಶ್ರೀರಾಮನವಮಿ ಪರ್ವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಕುಲಪತಿಗಳಾದ ಡಾ. ಅಹಲ್ಯರವರು ಭಗವಂತನಾದ ಶ್ರೀರಾಮನ ಫೋಟೋಗೆ ಧೂಪ, ದೀಪಾದಿಗಳಿಂದರ್ಚಿಸಿ ಪುಷ್ಪವನ್ನು ಸಮರ್ಪಣೆ ಮಾಡುವ ಮೂಲಕ ಪುರುಷೋತ್ತಮನಾದ ಶ್ರೀರಾಮನನ್ನು ಪೂಜಿಸಿದರು. ಹಾಗೆಯೇ ಕುಲಸಚಿವರಾದ ನರಸಿಂಹಪ್ಪರವರು, ಪ್ರೊ. ಗಿರೀಶ್ ಚಂದ್ರರವರು, ಪ್ರೊ. ಪಾಲಯ್ಯರವರು ಪುಷ್ಪವನ್ನು ಶ್ರೀ ರಾಮನ ಫೋಟೋಗೆ ಪುಷ್ಪವನ್ನು ಸಮರ್ಪಿಸುವ ಮೂಲಕ ಪಟ್ಟಾಭಿರಾಮನ್ನು ವಂದಿಸಿದರು.

ಈ ಸಂದರ್ಭದಲ್ಲಿ ವಿಶೇಷೋಪನ್ಯಾಸಕರಾಗಿ ವಿದ್ವಾನ್ ಗಣಪತಿ ಭಟ್ಟರವರು ಆಗಮಿಸಿದ್ದರು, ಅವರು ಉಪನ್ಯಾಸವನ್ನು ಮಾಡುತ್ತಾ ಪ್ರತಿಯೊಬ್ಬನೂ ಮನುಷ್ಯ ತನ್ನ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಾನೆ ಅಥವಾ ತನ್ನ ಪತ್ನಿಯ, ಮಕ್ಕಳ ಅಥವಾ ತಂದೆ ,ತಾಯಿಗಳ ಹುಟ್ಟು ಹಬ್ಬವನ್ನು ಆಚರಿಸಿವುದುಂಟು. ಅಂದರೆ ತನ್ನ ರಕ್ತ ಸಂಬಂಧಿಗಳ ಹುಟ್ಟು ಹಬ್ಬವನ್ನು ಆಚರಿಸಿವುದುಂಟು. ಆದರೆ ಯಾವುದೇ ರಕ್ತ ಸಂಬಂಧವಿಲ್ಲದೆ ಎಲ್ಲರೂ ಒಟ್ಟಾಗಿ ಹುಟ್ಟುಹಬ್ಬವನ್ನು ಆಚರಿಸುವ ವ್ಯಕ್ತಿಯೆಂದರೆ ಅದು ಭಗವಂತನಾದ, ಮರ್ಯಾದಾಪುರುಷೋತ್ತಮನಾದ ಶ್ರೀ ರಾಮನ ಹುಟ್ಟು ಹಬ್ಬವನ್ನು ಮಾತ್ರ. ಹೀಗೆ ಭಗವಂತನಾದ ಶ್ರೀ ರಾಮನೂ ಎಲ್ಲರಿಗೂ ಸಂಬಂಧಪಟ್ಟವನೂ ಎಂಬುದಾಗಿ ಅರ್ಥ. ಆದರ್ಶಪುರುಷನಾದ ಶ್ರೀರಾಮನನ್ನು ಜಗತ್ತಿನಲ್ಲಿರುವ ಎಲ್ಲ ಪ್ರಾಯದ ಮಾನವನೂ ಕೂಡ ಪ್ರೀತಿಸುತ್ತಾನೆ. ತಂದೆಯಾದವನೂ ತನ್ನ ಮಗನಾಗಿಯೂ, ಮಗನಾದವನೂ ತಂದೆಯಾಗಿಯೂ, ಶ್ರೀರಾಮನನ್ನು ಕಾಣುವುದುಂಟು. ಪತ್ನಿಯಾದವಳು ತನ್ನ ಗಂಡ ಶ್ರೀರಾಮಚಂದ್ರನಂತೆ ಇರಬೇಕು ಎಂದು ಬಯಸುವುದುಂಟು. ಶತ್ರುವೂ ಕೂಡ ತನ್ನ ಶತ್ರುವೂ ಶ್ರೀರಾಮಚಂದ್ರನಂತಿರಬೇಕು ಎಂದು

ಬಯಸುವಂಥದ್ದು. ಮಹರ್ಷಿ ವಾಲ್ಮೀಕಿಗಳು ನಾರದರನ್ನು ಕೇಳುತ್ತಾರೆ ಕಾಮ,ಕ್ರೋದಾದಿ ಅರಿಷಡ್ವರ್ಗಗಳನ್ನು ತ್ಯಜಿಸಿ ಶ್ರೇಷ್ಠವಾದ ಗುಣಗಳುಳ್ಳಂತಹ ಪುರುಷರು ಲೋಕದಲ್ಲಿ ಯಾರಾದರೂ ಇದ್ದಾರೆಯೋ? ಎಂದು ಪ್ರಶ್ನೆಯನ್ನು ಮಾಡುತ್ತಾರೆ, ಆಗ ನಾರದರು ಹೇಳುತ್ತಾರೆ ಉತ್ತಮವಾದ ಹದಿನಾರು ಗುಣಗಳುಳ್ಳಂತಹ ಈ ಭೂಲೋಕದಲ್ಲಿದ್ದಾನೆಂದರೇ ಅವನು ಆದರ್ಶಪುರುಷೋತ್ತಮನಾದ ಶ್ರೀರಾಮನೊಬ್ಬನೆ ಎಂದು ತಿಳಿಸುತ್ತಾರೆ. ಅನಂತರ ಆ ವಾಲ್ಮೀಕಿ ಮುನಿಗಳು ಪ್ರಾತಃಕಾಲದಲಿ ತಮಸಾ ನದಿಗೆ ಸ್ನಾನ ಮಾಡಲು ಹೊರಟಾಗ ಅಲ್ಲಿ ಒಂದು ದೃಶ್ಯವನ್ನು ನೋಡುತ್ತಾರೆ, ಎರಡು ಕ್ರೌಂಚ ಪಕ್ಷಿಗಳು ಮಿಥುನ ಕ್ರಿಯೆಯಲ್ಲಿ ತೊಡಗಿರುತ್ತವೆ ಅವುಗಳಲ್ಲಿ ಹೆಣ್ಣು ಕ್ರೌಂಚಪಕ್ಷಿಯನ್ನು ವ್ಯಾಧನೊಬ್ಬ ತನ್ನ ಬಾಣದಿಂದ ಕೊಲ್ಲುತ್ತಾನೆ ದೃಶ್ಯವನ್ನು ನೋಡಿದಂತಹ ವಾಲ್ಮೀಕಿ ಮಹಾಮುನಿಗಳು ವ್ಯಾಧನ ಮೇಲೆ ಕೋಪಗೊಂಡು ಈ ರೀತಿಯಾಗಿ ಶಾಪವನ್ನು ನೀಡುತ್ತಾರೆ ಅದು ಈ ರೀತಿಯಾಗಿ ಶ್ಲೋಕರೂಪದಲ್ಲಿ ಮುಖ ಕಮಲದಿಂದ ಹೊರಹೊಮ್ಮುತ್ತದೆ.

ಮಾ ನಿಷಾದ ಪ್ರತಿಷ್ಠಾಂ ತ್ವಮವಧೀಃ<br>
ಶಾಶ್ವತೀಃ ಸಮಾಃ ।<br>
ಯತ್ಕ್ರೌಂಚ ಮಿಥುನಾದೇಕಮವಧೀಃ<br>
ಕಾಮ ಮೋಹಿತಮ್ ॥

ಎಂಬುದಾಗಿ ನುಡಿದರು. ಇದೇ ಪದ್ಯವೂ ರಾಮಾಯಣ ಮಹಾಕಾವ್ಯದ ಮಂಗಳ ಶ್ಲೋಕವಾಯಿತು. ಎಂಬುದಾಗಿ ರಾಮಾಯಣದ ಬಗ್ಗೆ ವಿಶೇಷವಾಗಿ ವಿವರಿಸಿದರು.

ಕುಲಪತಿಗಳಾದ ಡಾ. ಅಹಲ್ಯರವರು ಮಾತನಾಡುತ್ತಾ ಶ್ರೀರಾಮಚಂದ್ರನೂ ಜಗತ್ತಿಗೆ ಉಪಕಾರ ಮಾಡಿದಂತಹ ಪ್ರಭುವೂ, ದುಷ್ಟರಾದ ರಾಕ್ಷಸರನ್ನು ಸಂಹರಿಸಿ ಸಜ್ಜನರನ್ನು ರಕ್ಷಿಸಿದಂತಹವನೂ, ಲೋಕಕ್ಕೆ ಮಂಗಳವನ್ನುಂಟು ಮಾಡಿದಂತಹ ಪುರುಷ, ಆದರ್ಶ ಪುರುಷನಾಗಿದ್ದಾನೆ. ರಾವಣನನ್ನು ಸಂಹರಿಸಿ ಲಂಕೆಯಿಂದ ಹೊರಡುವಾಗ ಲಂಕೆಯಲ್ಲಿಯೆ ಇರೋಣ ಎನ್ನುವ ಲಕ್ಷ್ಮಣನ ಮಾತಿಗೆ ಶ್ರೀರಾಮ ಈರೀತಿಯಾಗಿ ಹೇಳುತ್ತಾನೆ.

ಅಪಿ ಸ್ವರ್ಣಮಯೀ ಲಂಕಾ ನ ಮೇ<br>
ಲಕ್ಷ್ಮಣ ರೋಚತೇ ।<br>
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ<br>
ಗರೀಯಸೀ ॥

ಎಂಬುದಾಗಿ ಹೇಳುತ್ತಾನೆ. ನನ್ನ ಜನ್ಮ ಭೂಮಿಯೇ ನನ್ನ ಶ್ರೇಷ್ಠವಾದ ನೆಲ ಅದರ ಹೊರತಾಗಿ ಬೇರೆ ಯಾವುದೇ ಜಾಗದಲ್ಲಿಯೂ ನನಗೆ ಸಂತೋಷವೂ ಸಿಗುವುದಿಲ್ಲ ಎಂದು ರಾಮ ಹೇಳುತ್ತಾನೆ ಎಂದು ನುಡಿದರು. ಹೀಗೆ ಶ್ರೀ ರಾಮನೂ ಜಗತ್ತಿಗೆ ಆದರ್ಶಪುರುಷನಾಗಿದ್ದಾನೆ ಎಂಬುದಾಗಿ ಪುರುಷೋತ್ತಮನಾದ ಶ್ರೀರಾಮನ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಕಾರಿಗಳು, ಪ್ರಾಧ್ಯಾಪಕರು, ಸಂಶೋಧನಾ ಸಹಾಯಕರು, ಬೋಧಕೇತರ ಸಿಬ್ಬಂದಿಗಳು ಅತ್ಯಂತ ಶ್ರದ್ಧಾಭಕ್ತಿಗಳಿಂದ ಭಾಗವಹಿಸಿ ಭಗವಂತನಾದ ಶ್ರೀರಾಮನ ಕೃಪೆಗೆ ಪಾತ್ರರಾದರು.

# ಸ್ನಾತಕ ಪೂರ್ವ ದೀಕ್ಷಾಂತ ಸಮಾರೋಪ ಮತ್ತು ಸಂಸ್ಕೃತ ಸಪ್ತಾಹ

**ವಿದ್ವಾನ್ ಹೇಮರಾಜ. ಎನ್. ಎಸ್**
ಸಂಶೋಧನಾ ಸಹಾಯಕರು




ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ದಿನಾಂಕ;29.09.2022 ಗುರುವಾರದಂದು ಅಪರಾಹ್ನ 4.00ರ ಸಮಯಕ್ಕೆ ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಗಾಯನ ಸಮಾಜದಲ್ಲಿ **ಸ್ನಾತಕ ಪೂರ್ವ ದೀಕ್ಷಾಂತ ಸಮಾರೋಪ ಮತ್ತು ಸಂಸ್ಕೃತ ಸಪ್ತಾಹ** ಆಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ವಿತ್ತಸಚಿವರೂ ಆದ **ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು** ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು, ಸಹಕುಲಾಧಿಪತಿಗಳೂ ಆದ ಡಾ. ಸಿ. ಎನ್. ಅಶ್ವತ್ಥ ನಾರಾಯಣರವರು ವಹಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ. ಇ. ದೇವನಾಥನ್‌ರವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿತ್ತಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಮಾತನಾಡುತ್ತಾ ಸಂಸ್ಕೃತ ಭಾಷೆಯು ಜಗತ್ತಿನ ಭಾಷೆಯಾಗಿದೆ ಜಗತ್ತಿನ ಎಲ್ಲಾ ಧರ್ಮದವರು ಬಯಸುವ ಜೀವನದ ಮೌಲ್ಯಗಳು ಸಂಸ್ಕೃತ ಭಾಷೆಯ ಸಾಹಿತ್ಯದಲ್ಲಿದೆ. ಹಾಗಾಗಿ ವಿಶ್ವದ ಅನೇಕ ದೇಶಗಳಲ್ಲಿ ಇರುವ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತವನ್ನು ಬೋಧನೆಯನ್ನು ಮಾಡಲಾಗುತ್ತಿದೆ. ಕೆಲವು ದೇಶಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೇ ಸಂಸ್ಕೃತ ಬೋಧನೆಯನ್ನು ಆರಂಭಿಸಿದ್ದಾರೆ.

ಸಂಸ್ಕೃತಸಾಹಿತ್ಯವು ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳಲು ದಾರಿಯನ್ನು ತೋರಿಸುತ್ತದೆ ಮಾನವನಿಗೆ. **“ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ”** ವಿಶ್ವದ ಎಲ್ಲಡೆಯೂ ಶಾಂತಿಯು ನೆಲಸಲಿ. ಜಗತ್ತಿನಾದ್ಯಂತ ಮಂಗಳವುಂಟಾಗಲಿ. ಸಂಸ್ಕೃತ ಸಾಹಿತ್ಯದಲ್ಲಿರುವ ವಿಜ್ಞಾನ, ಜ್ಞಾನ, ತಂತ್ರಜ್ಞಾನದೊಂದಿಗೆ ಸಮಾಜವೂ ಬೆಳೆಯಲಿ ಎಂದರು.



ಹಾಗೆಯೇ ನಮ್ಮ ಭಾರತೀಯ ಪ್ರಾಚೀನ ಪರಂಪರೆಯನ್ನು ರಕ್ಷಿಸಬೇಕು. ಸಂಸ್ಕೃತ ಸಾಹಿತ್ಯದಲ್ಲಿರುವ ಅಗಾಧ ಜ್ಞಾನವನ್ನು ನಾವೆಲ್ಲರೂ ಪಡೆಯಬೇಕು, ದೇಶದ ವಿವಿಧ ಇಲಾಖೆಗಳಲ್ಲಿ ಸಂಸ್ಕೃತ ವಾಕ್ಯಗಳನ್ನು ಧ್ಯೇಯವಾಕ್ಯಗಳನ್ನಾಗಿಟ್ಟುಕೊಳ್ಳಲಾಗಿದೆ. ಋಗ್ಯಜುಸ್ಸಾಮಾಥರ್ವಣಾದಿಗಳಲ್ಲಿ ಉಲ್ಲೇಖಿಸಿರುವ ವಿಜ್ಞಾನದ ಅಂಶಗಳು ಮಾನವ ಕುಲಕ್ಕೆ ಉತ್ತಮವಾದ ಜೀವನವನ್ನು ರೂಪಿಸುವುದಕ್ಕೆ ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕುಲಪತಿಗಳಾದ ಪ್ರೊ. ದೇವನಾಥನ್‌ರವರು ಮಾತನಾಡುತ್ತಾ ಸಂಸ್ಕೃತ ಭಾಷೆಯು ಎಲ್ಲರೂ ಮಾತನಾಡುವಂತಹ ಭಾಷೆಯಾಗಬೇಕು. ಸಂಸ್ಕೃತ ಸಾಹಿತ್ಯದಲ್ಲಿರುವ ಶಾಸ್ತ್ರವಿಚಾರಗಳನ್ನು ತಿಳಿಯಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅನೇಕ ವಿಭಾಗಗಳನ್ನು ತೆರೆದು ಆಯಾ ಐಚ್ಛಿಕ ಶಾಸ್ತ್ರಗಳನ್ನು ಅಧ್ಯಯನ ಮಾಡುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ 31 ಮಹಾವಿದ್ಯಾಲಯಗಳಿದ್ದು ಅವುಗಳಲ್ಲಿ 3 ಸರ್ಕಾರಿ ಕಾಲೇಜುಗಳು, 09 ಅನುದಾನಿತ ಕಾಲೇಜುಗಳಿದ್ದು, 20 ಅನುದಾನರಹಿತ ಕಾಲೇಜುಗಳಿವೆ. ಕರ್ನಾಟಕದಾದ್ಯಂತ 50,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಅಲಂಕಾರ, ನ್ಯಾಯ, ವ್ಯಾಕರಣ, ಮೀಮಾಂಸಾ, ಧರ್ಮಶಾಸ್ತ್ರ, ಯೋಗ, ದ್ವೈತಾದ್ವೈತವಿಶಿಷ್ಟಾದ್ವೈತ ಶಾಸ್ತ್ರಗಳು, ವೇದಗಳು ಹೀಗೆ ಅನೇಕ ಶಾಸ್ತ್ರಗಳನ್ನು ಐಚ್ಛಿಕವಾಗಿ ವಿಭಾಗವಾರು ಅಧ್ಯಯನ ಮಾಡಬಹುದು.

ವಿದ್ಯಾವಾರಿಧಿ(ಪಿ,ಎಚ್.ಡಿ)ಕೋರ್ಸ್‌ನ್ನು ಕೂಡ ನಮ್ಮ ವಿಶ್ವವಿದ್ಯಾಲಯದಲ್ಲಿ ಮಾಡಬಹುದು. ನಮ್ಮ ವಿಶ್ವವಿದ್ಯಾಲಯವು **12-ಬಿ ಗ್ರೇಡನ್ನು** ಪಡೆದು ನ್ಯಾಕ್ ಮಾನ್ಯತೆಗೆ ಸಕಲ ವ್ಯವಸ್ಥೆಯನ್ನು ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಎಲ್ಲಾ ವರ್ಗದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಬದ್ಧವಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಯನ್ನು ಪಡೆದು ಅಧ್ಯಯನ ಮಾಡುವಂತಾಗಲಿ.



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದ ಪಾಠಶಾಲೆಗಳಲ್ಲಿ ಅನೇಕ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡಿ ನಿವೃತ್ತರಾಗುತ್ತಿರುವ ಗೌರವ ಶಿಕ್ಷಕರಿಗೆ ಅಭಿನಂದನೆಯನ್ನು ಸಲ್ಲಿಸಿದರು. ನಮ್ಮ ಆಹ್ವಾನವನ್ನು ಮನ್ನಿಸಿ ಈ ಕಾರ್ಯಕ್ರಮಕ್ಕೆ ಆಗಮಿಸಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರಿಗೆ ಅಭಿನಂದನೆಯನ್ನು ಸಲ್ಲಿಸಿದರು.

ಕರ್ನಾಟಕ ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಸಿ. ಪಾಲಯ್ಯರವರು ಕರ್ನಾಟಕ ಸಂಸ್ಕೃತ ನಿರ್ದೇಶನಾಲಯದ ವಿವಿಧ ಕಾರ್ಯಯೋಜನೆಗಳನ್ನು ವಿವರಿಸಿದರು. ಮುಂದೆ ಮಾಡಬೇಕಾಗಿರುವ ಕಾರ್ಯಗಳನ್ನು ಕೂಡ ತಿಳಿಸಿದರು. ಈ ಸಂದರ್ಭದಲ್ಲಿ ಹಿರಿಯ ವಿದ್ವಾಂಸರಾದ ಡಾ. ಶತಾವಧಾನಿ ಆರ್. ಗಣೇಶ್‌ರವರಿಗೆ ಸನ್ಮಾನವನ್ನು ಹಮ್ಮಿಕೊಳ್ಳಲಾಗಿತ್ತು. ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ ಅವರು ಸಂಸ್ಕೃತ ಮತ್ತು ಸಂಸ್ಕೃತಿಯು ಎರಡು ಅಭೇದ್ಯವಾಗಿರುವಂತದ್ದಾಗಿದೆ. ಗೀರ್ವಾಣ ವಾಣಿಯಾದ ಸಂಸ್ಕೃತ ಭಾಷೆಯು ಮಧುರವಾದ ಭಾಷೆಯಾಗಿದೆ. ಸಂಸ್ಕೃತ ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಿಳಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವಿ. ಗಿರೀಶ್‌ಚಂದ್ರರವರು ಉಪಸ್ಥಿತರಿದ್ದರು ಮತ್ತು ಕರ್ನಾಟಕ ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಸಿ. ಪಾಲಯ್ಯರವರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯದಾದ್ಯಂತ ವಿವಿಧ ಶಾಲಾ ಶಿಕ್ಷಕರು, ಪ್ರಾಧ್ಯಾಪಕರು ಆಗಮಿಸಿದ್ದರು ಅನೇಕ ಸಂಸ್ಕೃತ ಪ್ರೇಮಿಗಳು ಈ ಸಂದರ್ಭದಲ್ಲಿ ಆಗಮಿಸಿದ್ದರು. ಕಾರ್ಯಕ್ರಮವನ್ನು ಡಾ. ಶ್ರುತಿರವರು ನಿರೂಪಿಸಿದರು, ಕುಲಸಚಿವರಾದ ಪ್ರೊ. ವಿ. ಗಿರೀಶ್‌ಚಂದ್ರರವರು ಸ್ವಾಗತ ಭಾಷಣವನ್ನು ಮಾಡಿದರು. ವೇದಾಂತ ನಿಕಾಯಾಧ್ಯಕ್ಷರಾದ ಪ್ರೊ. ವೀರನಾರಾಯಣ ಪಾಂಡುರಂಗಿಯವರು ವಂದಿಸಿದರು.

# ಸಂಸ್ಕೃತ ಪಾಠಶಾಲಾ ನಿವೃತ್ತ ಶಿಕ್ಷಕರ ಸನ್ಮಾನ ಸಮಾರಂಭ

**ರಾಜಶೇಖರ. ಕೆ. ಕೆ.**
ಸಂಶೋಧನಾ ಸಹಾಯಕರು



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ದಿನಾಂಕ;29.09.2022 ಗುರುವಾರದಂದು ಪೂರ್ವಾಹ್ನ 11.00ರ ಸಮಯಕ್ಕೆ ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಗಾಯನ ಸಮಾಜದಲ್ಲಿ ಸಂಸ್ಕೃತ ಪಾಠಶಾಲಾ ನಿವೃತ್ತ ಶಿಕ್ಷಕರ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ಮತ್ತು ಆಶೀರ್ವಚನವನ್ನು ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್‌ರವರು, ಅಧ್ಯಕ್ಷರು, ರಾಮಕೃಷ್ಣ ಮಠ, ಬೆಂಗಳೂರು. ಇವರು ವಹಿಸಿದ್ದರು. ಅಧ್ಯಕ್ಷತೆಯನ್ನು ಪ್ರೊ. ಕಾ. ಇ. ದೇವನಾಥನ್‌ರವರು ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯು, ಇವರು ಅಲಂಕರಿಸಿದ್ದರು. ಈ ಸಂದರ್ಭದಲ್ಲಿ ಪ್ರೊ. ವಿ. ಗಿರೀಶ್‌ಚಂದ್ರರವರು, ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಶ್ರೀ ಎಸ್. ಕುಮಾರ್‌ರವರು ಹಣಕಾಸು ಅಧಿಕಾರಿಗಳು (ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ಉಪಸ್ಥಿತರಿದ್ದರು.

ಬೆಳಿಗ್ಗೆ 11.00 ಗಂಟೆಗೆ ಸಭಾ ಕಾರ್ಯಕ್ರಮವು ಆರಂಭವಾಯಿತು. ಆಹ್ವಾನಿತರು ಸಭಾಂಗಣದಲ್ಲಿ ಆಸೀನರಾಗಿದ್ದರು. ಈ ಸಂದರ್ಭದಲ್ಲಿ ಅತ್ಯುತ್ತಮ ಪಾಠಶಾಲೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಪುರಸ್ಕರಿಸಲಾಯಿತು. ಜೊತೆಗೆ ಪಾಠಶಾಲೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ವಿದ್ವಾಂಸರಾದ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.



ಈ ಸಂದರ್ಭದಲ್ಲಿ ದಿವ್ಯಸಾನಿಧ್ಯ ವಹಿಸಿ ದಿವ್ಯಾಶೀರ್ವಚನವನ್ನು ನೀಡುತ್ತಾ ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್‌ರವರು, ಸಂಸ್ಕೃತ ಭಾಷೆಯು ಅತ್ಯಂತ ಪ್ರಾಚೀನವಾದ ಭಾಷೆಯಾಗಿದೆ. ನಾಲ್ಕು ವೇದಗಳು, ಶ್ರುತಿ, ಸ್ಮೃತಿ, ಪುರಾಣಗಳು, ಆಗಮಗಳು, ಮಹಾಕಾವ್ಯಗಳು, ಆಯುರ್ವೇದ, ವಿಜ್ಞಾನ, ಜ್ಯೋತಿಷ್ಯ ಮುಂತಾದ ವಿಷಯಗಳು ಸಂಸ್ಕೃತ ಸಾಹಿತ್ಯದಲ್ಲಿ ಅಡಗಿದೆ.

ನಮ್ಮ ಪ್ರಾಚೀನ ಪರಂಪರೆಯು ಸನಾತನ ವೈದಿಕ ಪರಂಪರೆಯಾಗಿದೆ. "ಅಹಿಂಸಾ ಪರಮೋ ಧರ್ಮಃ" ಎಂಬುವ ಸಂಸ್ಕೃತಿ ನಮ್ಮದಾಗಿದೆ ಯಾವ ಜೀವಿಯನ್ನು ನೋಯಿಸದೆ ಇರುವಂತಹ ಆಚರಣೆ ನಮ್ಮ ಸಂಸ್ಕೃತಿಯಾಗಿದೆ. ಪರರಿಗೆ ಸಹಾಯವನ್ನು ಮಾಡುವಂತಹ, ಕಷ್ಟದಲ್ಲಿರುವ ಜೀವಿಗಳಿಗೆ ಆಸರೆಯಾಗುವಂತಹ, ಮತ್ತೊಬ್ಬರಿಗೆ ಉಪಕಾರವನ್ನು ಬಯಸುವಂತಹ, ಮಹಿಳೆಯರನ್ನು ಗೌರವಿಸುವಂತಹ, ದೀನರಿಗೆ ಬೆನ್ನೆಲುಬಾಗಿ ನಿಲ್ಲುವಂತಹ ಆಚರಣೆಯನ್ನು ಈ ಭರತಭೂಮಿ ನೀಡಿದೆ.

ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಜನಿಸಿದಂತಹ ಈ ಮಹಾಭೂಮಿಯಾಗಿದೆ. ವಿವೇಕಾನಂದರು ಹೇಳುತ್ತಾರೆ ಸಂಸ್ಕೃತಿಯನ್ನು ಜನ್ಮಭೂಮಿಯನ್ನು ಎಂದಿಗೂ ಅಸಡ್ಡೆ ಮಾಡಬಾರದು ಎಂಬುದಾಗಿ, ಹಾಗಾಗಿ ಸಂಸ್ಕೃತಿಯು ನಮ್ಮ ಅತ್ಯುತ್ತಮವಾದ ಜೀವನದ ಮಾರ್ಗಕ್ಕೆ ಮಾನದಂಡವಾಗಿದೆ ಎಂದು ನುಡಿದರು.



ಕುಲಪತಿಗಳಾದ ಪ್ರೊ. ಕೆ. ಇ. ದೇವನಾಥನ್‌ರವರು ಅಧ್ಯಕ್ಷಭಾಷಣವನ್ನು ಮಾಡುತ್ತಾ, ಇಂದು ಬಹಳ ಸಂತೋಷವಾಗುತ್ತಿದೆ. ಒಮ್ಮೆಲೇ ಇಷ್ಟೊಂದು ಬಹಳ ಜನ ವಿದ್ವಾಂಸರನ್ನು ನೋಡುವ ಭಾಗ್ಯ ನನ್ನದಾಗಿದೆ. ಬಹಳ ವರ್ಷಗಳ ಕಾಲ ಸಂಸ್ಕೃತ ಸೇವೆಯನ್ನು ಮಾಡಿ ನಿವೃತ್ತರಾಗುತ್ತಿದ್ದೀರಿ, ಅನೇಕ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ್ದೀರಿ. ಅನವರತವಾಗಿ ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಿದ್ದೀರಿ, ಇಂತಹ ಮಹಾವಿದ್ವಾಂಸರನ್ನು ಇಂದು ಕರೆದು ಗೌರವಿಸುತ್ತಿರುವುದು ಅತ್ಯಂತ ಹರ್ಷದ ಸಂಗತಿ, ನಿವೃತ್ತರಾದ ನಂತರ ನಿಮ್ಮ ಜೀವನ ಸುಖಮಯವಾಗಿರಲಿ ಎಂದು ಹಾರೈಸಿದರು. ಸಂಸ್ಕೃತ ಸಾಹಿತ್ಯವು ವಿಶಾಲವಾದ ಸಾಹಿತ್ಯವಾಗಿದೆ. ಶಾಸ್ತ್ರಾದಿ ವಿಚಾರಗಳನ್ನು ಸಂಸ್ಕೃತ ಸಾಹಿತ್ಯದಲ್ಲಿ ತಿಳಿಯಬಹುದು. ವೇದಗಳಲ್ಲಿ ಇರುವ ವಿಚಾರಧಾರೆಯನ್ನು ಸರ್ವರು ತಿಳಿಯಬೇಕು, ತಿಳಿದು ಅಳವಡಿಸಿಕೊಂಡು ನಡೆಯಬೇಕು ಎಂದು ತಿಳಿಸಿದರು.

ಕುಲಸಚಿವರಾದ ಪ್ರೊ. ವಿ. ಗಿರೀಶ್‌ಚಂದ್ರರವರು ಮಾತನಾಡಿ ಅನೇಕ ದಿವಸಗಳ ನಂತರ ನಿಮ್ಮೆಲ್ಲರ ಭೇಟಿಯಾಗಿದೆ, ಕಾರಣ ನಾನು ನಿರ್ದೇಶಕನಾಗಿದ್ದಂತಹ ಸಂದರ್ಭದಲ್ಲಿ ನಿಮ್ಮೆಲ್ಲರ ಜೊತೆ ಒಡನಾಟ ತುಂಬಾ ಚೆನ್ನಾಗಿತ್ತು, ನೀವೆಲ್ಲರೂ ಆ ಸಂದರ್ಭದಲ್ಲಿ ಉತ್ತಮವಾಗಿ ಸ್ಪಂದಿಸಿದ್ದೀರಿ, ನಾನು ನಿರ್ದೇಶಕನಾಗಿದ್ದಂತಹ ಸಂದರ್ಭದಲ್ಲಿ ಅನೇಕ ಹೊಸ ಕಾರ್ಯಕ್ರಮಗಳನ್ನು ರೂಪಿಸಿದೆ. ಶಿಕ್ಷಕರುಗಳಿಗೆ ಶಿಬಿರಗಳನ್ನು ಮಾಡಿಸಿದೆ. ಹೊಸ ಹೊಸ ಹುದ್ದೆಗಳನ್ನು ಸೃಷ್ಟಿಸಿ ನೇಮಕಾತಿಯನ್ನು ನಡೆಸಿಕೊಟ್ಟಿದ್ದೇನೆ. ಪ್ರಸ್ತುತ ನಿರ್ದೇಶಕರಾದ ಪ್ರೊ. ಸಿ. ಪಾಲಯ್ಯನವರು ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದರು.




ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಸಿ. ಪಾಲಯ್ಯನವರು ಮಾತನಾಡಿ ನಾವು ಸಂಸ್ಕೃತ ಪಾಠಶಾಲೆಯ ಶಿಕ್ಷಕರ ಶ್ರೇಯೋಭಿವೃದ್ಧಿಗೆ ಸದಾ ಸಿದ್ಧವಿರುತ್ತೇವೆ. ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳ ಬೋಧನೆಗೆ ಬೇಕಾಗಿರುವ ಎಲ್ಲ ಕೌಶಲವನ್ನು ಹೆಚ್ಚಿಸಲು ಶಿಕ್ಷಕರಿಗೆ ಪ್ರಶಿಕ್ಷಣವನ್ನು ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳು ಇದರ ಅನುಕೂಲವನ್ನು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಅಂತಿಮವಾಗಿ ಕಾರ್ಯಕ್ರಮವು ಶಾಂತಿಮಂತ್ರದೊಂದಿಗೆ ಸಮಾಪ್ತಿಯಾಯಿತು.

## ನಿವೃತ್ತ ಶಿಕ್ಷಕರ ವಿವರ

1 ಜಿ.ಆರ್. ಲೋಕೇಶಪ್ಪ, ಶ್ರೀಮದ್ ರಂಭಾಪುರಿ ಸಂಸ್ಕೃತ ಪಾಠಶಾಲೆ, ಭದ್ರಾ ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ

2 ಎನ್. ಜಯಕರ ಆಚಾರ್ಯ, ಶ್ರೀ ನಾಗಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ, ಆಲಂಗಾರು, ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆ

3 ವಿಶಾಲಾಕ್ಷಿ ಜಿ. ದೇಶಪಾಂಡೆ, ಹಿರೇಮಠ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ಬಾಪೂಜಿನಗರ, ಕೂಡ್ಲಿಗಿ, ಬಳ್ಳಾರಿ ಜಿಲ್ಲೆ

4 ಮಲ್ಲಿಕಾರ್ಜುನಯ್ಯ, ಶ್ರೀ ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ವಿನೋಬನಗರ, ತುಮಕೂರು

5 ಎಸ್.ಎಮ್. ಶಿವಾಕುಮಾರಸ್ವಾಮಿ ಶ್ರೀ ಸಿದ್ಧರಾಮೇಶ್ವರ ಸಂಸ್ಕೃತ ಪಾಠಶಾಲೆ, ಯಲಗುಂದ, ಹಾಸನ ಜಿಲ್ಲೆ.

6 ಜಿ. ಶಾಂತಾಸುಜಾತ ಸಂಸ್ಕೃತ ಪಾಠಶಾಲೆ, ಸರ್ ಎಂ.ವಿ. ಬಡಾವಣೆ, ಉಲ್ಲಾಳು ಉಪನಗರ, ಬೆಂಗಳೂರು

7 ಜ್ಯೋತಿ ಕೆ. ಎನ್. ಶ್ರೀ ಕೊಂಗಾಡಿಯಪ್ಪ ಸಂಸ್ಕೃತ ಪಾಠಶಾಲೆ, ಸ್ವಾಮಿ ವಿವೇಕಾನಂದ ರಸ್ತೆ, ದೊಡ್ಡಬಳ್ಳಾಪುರ

8 ಅರ್ಚಕಂ ಪದ್ಮಾವತಿ, ಮುಖ್ಯಶಿಕ್ಷಕರು ವೀರನಾರಾಯಣ ಕೃಪಾ ಸಂಸ್ಕೃತ ಪಾಠಶಾಲೆ, ಯಗವಕೋಟೆ, ಚಿಂತಾಮಣಿ ತಾ, ಚಿಕ್ಕಬಳ್ಳಾಪುರ

9 ಎಂ.ಎಂ. ಮಹೇಶ್ವರಿ, ವಿಶ್ವಚೇತನ ಸಂಸ್ಕೃತ ಪಾಠಶಾಲೆ, ಅಗ್ರಹಾರ, ಟಿ. ನರಸೀಪುರ, ಮೈಸೂರು ಜಿಲ್ಲೆ

10 ಬಿ. ಚಂದ್ರಶೇಖರ ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಕುಣಿಗಲ್, ತುಮಕೂರು ಜಿಲ್ಲೆ

11 ಎಂ.ಸಿ. ಭೋಜಯ್ಯ, ಉರಿಗದ್ದಿಗೇಶ್ವರ ಸಂಸ್ಕೃತ ಪಾಠಶಾಲೆ, ಬೆಟ್ಟಹಳ್ಳಿಮಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ

12 ಎಸ್.ಎನ್. ಕಾಳಗೌಡರ, ಸರ್ವೋದಯ ಸಂಸ್ಕೃತ ಪಾಠಶಾಲೆ, ಮುಗದ, ಧಾರವಾಡ ಜಿಲ್ಲೆ

13 ಜಿ. ಶಿವರಾಮೇಗೌಡ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಪಾಠಶಾಲೆ, ಆದಿಚುಂಚನಗಿರಿ, ನಾಗಮಂಡಲ ತಾಲ್ಲೂಕು, ಮಂಡ್ಯ ಜಿಲ್ಲೆ

14 ಟಿ.ಎಂ. ರೇಣುಕಯ್ಯ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಬೆಟ್ಟದಹಳ್ಳಿ, ಗವಿಮಠ, ಗುಬ್ಬಿ ತಾಲ್ಲೂಕು, ತುಮಕೂರು

15 ಎಸ್. ಬಿ. ನಿಡಗುಂದಿ ಶ್ರೀ ವೆಂಕಟೇಶ್ವರ ಸಂಸ್ಕೃತ ಪಾಠಶಾಲೆ, ಜಾಲಿಹಾಳ, ಬಾದಮಿ ತಾ॥

16 ಎಚ್.ಎ. ನಟರಾಜ ಶಾಲಿವಾಹನ ಸಂಸ್ಕೃತ ಪಾಠಶಾಲೆ, ತಂಡಗ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ

17 ಜಿ.ಜಿ. ಜೋಶಿ ಶ್ರೀ ವಾಣಿವಿನಾಯಕ ಸಂಸ್ಕೃತ ಪಾಠಶಾಲೆ, ಹೆಗ್ಗರಣೆ(ಮಾಸ್ತಿಮನೆ), ಸಿದ್ದಾಪುರ, ಉ.ಕ. ಜಿಲ್ಲೆ

18 ಎಸ್.ಸಿ. ಕತ್ತಿಕೈ ಮಹಾಂತೇಶ್ವರ ಸಂಸ್ಕೃತ ಪಾಠಶಾಲೆ, ಹತ್ತಿಮತ್ತೂರ, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ

19 ಎಲ್. ನಾಗಭೂಷಣರಾವ್ ಶ್ರೀ ರುದ್ರೇಶ್ವರ ಸಂಸ್ಕೃತ ಪಾಠಶಾಲೆ, ರಾಜಘಟ್ಟ,

ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು

20 ಪಿ. ನೀಲಕಂಠಸ್ವಾಮಿ ನಂಜುಂಡೇಶ್ವರ ಸಂಸ್ಕೃತ ಪಾಠಶಾಲೆ, ಹಳೇಹುಬ್ಬಳ್ಳಿ, ಧಾರವಾಡ ಜಿಲ್ಲೆ

21 ರುದ್ರಸ್ವಾಮಿ, ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಬಂಡೇಮಠ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ

22 ಬಿ.ಆರ್. ಗೋಠೆ ಶ್ರೀ ಸಮೀರ ಸಂಸ್ಕೃತ ಪಾಠಶಾಲೆ, ಹಲಗಣಿ, ವಿಜಯಪುರ ಜಿಲ್ಲೆ

23 ಸದಾಶಿವ ಕೆ. ಭಟ್ಟ ಶಂಕರಭಾರತಿ ಸಂಸ್ಕೃತ ಪಾಠಶಾಲೆ, ಸೋಮೇನಹಳ್ಳಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

24 ಸಿದ್ಧಗಂಗಮ್ಮ ಸುಜಾತ ಸಂಸ್ಕೃತ ಪಾಠಶಾಲೆ, ಸರ್ ಎಂ.ವಿ. ಬಡಾವಣೆ, ಉಲ್ಲಾಳು ಉಪನಗರ, ಬೆಂಗಳೂರು

25 ಎಚ್.ಎಲ್. ಚಂದ್ರಶೇಖರಶಾಸ್ತ್ರೀ ಶ್ರೀ ಲಕ್ಷ್ಮೀವೆಂಕಟೇಶ್ವರ ಸಂಸ್ಕೃತ ಪಾಠಶಾಲೆ, ಗಾಯತ್ರೀನಗರ, ಬೆಂಗಳೂರು

26 ಎನ್. ಶಿವಣ್ಣ ಶ್ರೀ ಶಿವಕುಮಾರಸ್ವಾಮೀಜಿ ವೇದ–ಸಂಸ್ಕೃತ ಪಾಠಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು

27 ಸಿ. ಮಹದೇವಯ್ಯ ಶ್ರೀ ಮಹಂತೇಶ್ವರ ಸಂಸ್ಕೃತ ಪಾಠಶಾಲೆ, ಕುದೂರು, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ

28 ಶ್ರೀ ಶೀನಾ ನಾಯ್ಕ ಶ್ರೀ ಹರಿಹರೇಶ್ವರ ಸಂಸ್ಕೃತ ಪಾಠಶಾಲೆ, ದುರ್ಗ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ

29 ಶ್ರೀ ಎನ್. ಜಯಶ್ರೀ ಆರ್. ಕೇಳಕರ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲಾ , ಶಿವಬಸವನಗರ, ಬೆಳಗಾವಿ–590010

30 ಶ್ರೀ ಸಿ.ಆರ್. ಹಿರೇಮಠ ಶ್ರೀ ಜಗದ್ಗುರು ಅರ್ಧನಾರೀಶ್ವರ ಸಂಸ್ಕೃತ ಪಾಠಶಾಲೆ, ಡಂಬಳ–582113, ಮುಂಡರಗಿ ತಾ. ಗದಗ ಜಿಲ್ಲೆ.

31 ಶ್ರೀ ಎಸ್. ಶಿವಶಂಕರಯ್ಯ ಶ್ರೀ ಉದ್ದಾನೇಶ್ವರ ವೇದ–ಸಂಸ್ಕೃತ ಪಾಠಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು

32 ಶ್ರೀ ಎಸ್.ಬಿ. ಶ್ರೀನಿವಾಸಮೂರ್ತಿ. ಶ್ರೀ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ವಿದ್ಯಾವರ್ಧಕ ಸಂಘ, ಕಂಬಾಳು ಸಂಸ್ಥಾನ ಮಠ, ಕಂಬಾಳು, ನೆಲಮಂಗಲ ತಾಲ್ಲೋಕ, ಬೆಂಗಳುರು ಸಂಸ್ಕೃತ ಪಾಠಶಾಲೆ,

33 ಶ್ರೀ ಸಿ. ಕೆ. ಉಷಾದೇವಿ ಸಂಸ್ಕೃತ ಪಾಠಶಾಲೆ, ಭಾರತೀ ವಿದ್ಯಾ ಸಂಸ್ಥೆ ಆವರಣ, ಭಾರತೀ ನಗರ, ಚಿಕ್ಕಬಳ್ಳಾಪುರ

34 ಬಿ.ಬೋರೇಗೌಡ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಪಾಠಶಾಲೆ, ಆದಿಚುಂಚನಗಿರಿ, ನಾಗಮಂಡಲ ತಾಲ್ಲೂಕು, ಮಂಡ್ಯ ಜಿಲ್ಲೆ

35 ಶ್ರೀ ಬಿ. ಪ್ರಭುಸ್ವಾಮಿ, ಶ್ರೀ ಮಲೈಮಹದೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಮಠದ ಬೀದಿ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ–571440

36 ಶ್ರೀಮತಿ ಎ. ವೆಂಕಟಲಕ್ಷಮ್ಮ ಸಂಸ್ಕೃತ ಪಾಠಶಾಲೆ ದಾರಿನಾಯುಕನಪಾಳ್ಯ, ಗೌರಿಬಿದನೂರು, ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

37 ಶ್ರೀ ಕೆ, ಎನ್. ದೇವರಾಜಯ್ಯ ಶ್ರೀಮದ್ ರಂಭಾಪುರಿ ವಿದ್ಯಾಸಂಸ್ಥೆ (ರಿ), ಗೋಡೆಕೆರೆ-572214, ಚಿಕ್ಕನಯಕನಹಳ್ಳಿ ತಲ್ಲೂಕು, ತುಮಕೂರು ಜಿಲ್ಲೆ.

38 ಶ್ರೀ ದಯಾನಂದ. ಬಿ.ಎನ್. ಶ್ರೀ ಸಿದ್ಧಾರ್ಥಸಂಸ್ಕೃತ ಪಾಠಶಾಲೆ, ಸಿದ್ಧಾರ್ಥ ನಗರ, ತುಮಕೂರು ತಾಲ್ಲೂಕು.

39 ಶ್ರೀ ಟಿ.ಎಸ್. ಮೂರ್ತಿ ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ, ಶ್ರೀ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು

40 ಶ್ರೀ ಸುಬ್ರಾಯ. ವಿ. ಭಟ್ಟ ಶ್ರೀ ಶಂಕರಭಾರತಿ ಸಂಸ್ಕೃತ ಪಾಠಶಾಲೆ, ಸೋಮೇನಹಳ್ಳಿ, ಗುಡಿಬಂಡೆ ತಾಲ್ಲೂಕು, ಪೆರೇಸಂದ್ರ-562104, ಚಿಕ್ಕಬಳ್ಳಾಪುರ ಜಿಲ್ಲೆ.

41 ಶ್ರೀ ಶಿವಮೂರ್ತಿ. ಎಸ್ ಶ್ರೀ ತರಳಬಾಳು ಜಗದ್ಗುರು ಸಂಸ್ಕೃತ ಪಾಠಶಾಲೆ, ಸಿರಿಗೆರೆ-577541 ಚಿತ್ರದುರ್ಗ ಜಿಲ್ಲೆ

42 ಶ್ರೀ ಎಸ್.ಎಸ್. ಮಠಪತಿ ಶ್ರೀ ಲಕ್ಷ್ಮೀವೆಂಕಟೇಶ್ವರ ಸಂಸ್ಕೃತ ಪಾಠಶಾಲೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ-587301

43 ಶ್ರೀ ಜಿ. ಶ್ರೀನಿವಾಸ ರಾಘವನ್ ಶ್ರೀ ಸಾಂಪ್ರದಾಯಿಕ ಸಂಸ್ಕೃತ ಪಾಠಶಾಲೆ, ಸಂಜಯನಗರ, ದೊಡ್ಡಬಳ್ಳಾಪುರ-561203, ಬೆಂಗಳೂರು, ಗ್ರಾಮಾಂತರ ಜಿಲ್ಲೆ.

44 ಶ್ರೀ ಕೆ.ವ್ಹಿ. ಹಿರೇಮಠ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಕೃತ ಪಾಠಶಾಲೆ, ಮುಂಡಗಿ-582118

45 ಶ್ರೀ ದೊರೆಸ್ವಾಮಿ ಶ್ರೀ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಮಾದಾಪುರ, ಹೆಚ್ ಡಿ ಕೋಟೆ, ಮೈಸೂರು

46 ಶ್ರೀ ವಿಶ್ವೇಶ್ವರ ಎಸ್, ಭಟ್ಟ ಶ್ರೀ ಶಾರದಾಂಬಾ ಸಂಸ್ಕೃತ ಪಾಠಶಾಲೆ, ನಾಯಕನಕೆರೆ, ಪೋ. ಬಾಳಗಿಮನೆ ತಾ. ಯಲ್ಲಾಪುರ – 581359

47 ಶ್ರೀ ವಿಶ್ವೇಶ್ವರ ಲ, ಭಟ್ಟ ಶ್ರೀ ಭಾರತಿ ಸಂಸ್ಕೃತ ಪಾಠಶಾಲೆ, ಬೈರುಂಬೆ, ಶಿರಸಿ ತಾ, ಉತ್ತರ ಕನ್ನಡ ಜಿಲ್ಲೆ

48 ಶ್ರೀ ಎಸ್. ಮುರಳೀಧರ್ ಶ್ರೀ ಶಾರದ ಸಂಸ್ಕೃತ ಪಾಠಶಾಲೆ, ವಿಜಯಪುರ, ದೇವನಹಳ್ಳಿ ತಾ, ಬೆಂಗಳೂರು ಗ್ರಾಮಾಂತರ ಜಿಲ್ಲೆ

49 ಶ್ರೀ ಪಿ, ಚನ್ನಬಸಪ್ಪ ಶ್ರೀಮಲೈ ಮಹದೇಶ್ವರ ಸ್ವಾಮಿ ಕೃಪಾ ಎಜುಕೇಷನ್ ಸೊಸೈಟಿ (ರಿ), ಮಲೆ ಮಹದೇಶ್ವರ ಬೆಟ್ಟ – 571490 ಹನೂರು ತಲ್ಲೂಕು, ಚಾಮರಾಜನಗರ ಜಿಲ್ಲೆ

50 ಶ್ರೀ ಎಂ.ಎಸ್. ಸತ್ಯನಾರಾಯಣ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಸಂಸ್ಕೃತ ಪಾಠಶಾಲೆ ದುರ್ಗಿಗುಡಿಬೀದಿ, ಶಿವಮೊಗ್ಗ-577201

51 ಆರ್. ಸುಜಾತ ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಚಾಮರಾಜನಗರ-573113

52 ಶ್ರೀಮತಿ ಪಿ.ಎಸ್. ಕಳಸಾಪುರ ಶ್ರೀ ಲಕ್ಷ್ಮೀ ನರಸಿಂಹ ಸಂಸ್ಕೃತ ಪಾಠಶಾಲೆ, ಜಮಖಂಡಿ ತಾ, ಬಾಗಲಕೋಟೆ ಜಿಲ್ಲೆ

53 ಶ್ರೀ ಸಿ.ಎನ್. ಚಂದ್ರಶೇಖರಯ್ಯ ಶ್ರೀ ಶಿವಕುಮಾರಸ್ವಾಮೀಜಿ ವೇದ- ಸಂಸ್ಕೃತ ಪಾಠಶಾಲೆ, ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ

54 ಶ್ರೀ ಬಿ.ಎಸ್.ಸಿದ್ಧರಾಮಯ್ಯ ಶ್ರೀ ಬಾಪೂಜಿ ಸಂಸ್ಕೃತ ಪಾಠಶಾಲೆ, ಶಾರದ ದೇವಿ ನಗರ, ತುಮೂಕೂರು,

55 ಶ್ರೀ ಸೀತಾರಾಮಭಟ್ ಶ್ರೀ ಮಲೈಮಹದೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಮಠದ ಬೀದಿ, ಕೊಳ್ಳೆಗಾಲ, ಚಾಮರಾಜನಗರ ಜಿಲ್ಲೆ.

56 ಶ್ರೀ ಟಿ.ಸಿ. ಆನಂದ ಕುಮಾರ್ ಶ್ರೀ ಮನೋನ್ಮನೀ ಸಂಸ್ಕೃತ ಪಾಠಶಾಲೆ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು

57 ಶ್ರೀ ಎಸ್. ಆರ್. ರುದ್ರಾರಾಧ್ಯ ಶ್ರೀ ವಿದ್ಯಾನಿವೇದಿತ ಸಂಸ್ಕೃತ ಪಾಠಶಾಲೆ, ಮಂಜುನಾಥನಗರ, ಬೆಂಗಳೂರು

58 ಶ್ರೀ ರಂಗಸ್ವಾಮಯ್ಯ ಹೆಚ್.ಬಿ. ಶ್ರೀ ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಗಾಂಧಿನಗರ, ಮೈಸೂರು

59 ಶ್ರೀ ಎ. ಜವರೇಗೌಡ ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ, ಚುಂಚನಕಟ್ಟೆ, ಕೆ.ಆರ್.ನಗರ ತಾ. ಮೈಸೂರು



ಮಾನ್ಯ ಕುಲಪತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಶ್ ಜೋಷಿಯವರನ್ನು ಬೇಟಿ ಮಾಡಿದ ಸಂದರ್ಭ

# ವಿಶ್ವವಿದ್ಯಾಲಯದ ಶಾರದಾ ನಮನಮ್ ಹಾಗೂ ಪ್ರೊ. ಕೆ. ಇ. ದೇವನಾಥನ್‌ರವರ ಬೀಳ್ಕೊಡುಗೆ ಸಮಾರಂಭ

ಡಾ. ಮಲ್ಲನ ಗೌಡ
ಸಹಾಯಕ ನಿರ್ದೇಶಕರು, ಪ್ರಸಾರಾಂಗ



ದಿನಾಂಕ:30.09.2022ರಂದು ನವರಾತ್ರಿಯ ವಿಶೇಷ ದಿನವಾದ ಐದನೇ ದಿನದಂದು ಸರಸ್ವತಿಯ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಸರಸ್ವತಿಯ ಮೂರ್ತಿಯನ್ನು ಹಾಗೂ ಫೋಟೋವನ್ನು ಸ್ಥಾಪಿಸಿ ವಿಶೇಷ ಹೂವಿನ ಅಲಂಕಾರವನ್ನು ಮಾಡಿ, ವಿಶೇಷವಾದ ವಿವಿಧ ನೈವೇದ್ಯಗಳನ್ನಿರಿಸಿ, ಸಂಕಲ್ಪದ ಮೂಲಕ ಸರಸ್ವತಿಯ ಅಷ್ಟೋತ್ತರಗಳ ಮೂಲಕ ಧೂಪ, ದೀಪಗಳ ಬೆಳಗುವ ಮೂಲಕ ವಿಶೇಷ ಪೂಜಾ ಸೇವೆಯನ್ನು ಮಾಡಲಾಯಿತು. ಈ ಪೂಜಾ ಕೈಂಕರ್ಯದಲ್ಲಿ ಕುಲಪತಿಗಳಾದ ಪ್ರೊ. ಕೆ. ಇ. ದೇವನಾಥನ್‌ರವರು, ಕುಲಸಚಿವರಾದ ಪ್ರೊ. ವಿ. ಗಿರೀಶ್‌ಚಂದ್ರರವರು ಹಾಗೂ ಕಸಂವಿಯ ವಿವಿಧ ವಿಭಾಗದ ಪ್ರಾಧ್ಯಾಪಕರು ಎಲ್ಲಾ ನೌಕರರು ಶ್ರದ್ಧಾ ಭಕ್ತಿಗಳಿಂದ ಭಾಗವಹಿಸಿದ್ದರು.

ಸರಸ್ವತಿಯ ಪೂಜಾ ಕಾರ್ಯಕ್ರಮವು ಸಂಪನ್ನಗೊಂಡ ನಂತರ ಪ್ರೊ. ಕೆ. ಇ. ದೇವನಾಥನ್‌ರವರ ಬೀಳ್ಕೊಡುಗೆ ಸಮಾರಂಭವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸೆಮಿನಾರ್‌ಹಾಲ್‌ನಲ್ಲಿ ಜರುಗಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವಿ. ಗಿರೀಶ್ ಚಂದ್ರರವರು ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಎಲ್ಲಾ ನೌಕರರನ್ನು ಉದ್ದೇಶಿಸಿ ಮಾತನಾಡಿದ ಪ್ರೊ. ಕೆ. ಇ. ದೇವನಾಥನ್‌ರವರು ನಿಮ್ಮೆಲ್ಲರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟು ದಿವಸಗಳ ಕಾಲ ಎಲ್ಲಾ ಕಾರ್ಯಗಳಲ್ಲಿ ಸ್ಪಂದಿಸಿದ್ದೀರಿ. ನಾನು ವಿಶ್ವವಿದ್ಯಾಲಯದ ಸೇವಕನಾಗಿ ಸೇವೆಯನ್ನು ಮಾಡಿದ್ದೀನಿ,

ನಾವೆಲ್ಲರೂ ಜೊತೆಗೂಡಿ ವಿಶ್ವವಿದ್ಯಾಲಯದ ಕಾರ್ಯಗಳನ್ನು ಮಾಡಿದ್ದೇವೆ. ಹಾಗಾಗಿ ಎಲ್ಲಾ ನೌಕರರು ವಿಶ್ವವಿದ್ಯಾಲಯದ ಏಳಿಗೆಗೆ ಶ್ರಮಿಸಿ ಎಂದು ಕರೆ ಕೊಟ್ಟರು. ಯಾರೂ ಅನ್ಯಥಾ ಭಾವಿಸಬಾರದು ನನ್ನ ಅನಾರೋಗ್ಯದ ಕಾರಣದಿಂದ ನನ್ನ ಕರ್ತವ್ಯದ ಮಧ್ಯೆಯೆ ವಿಶ್ರಾಂತಿಯನ್ನು ಪಡೆಯಬೇಕಾಗಿದೆ, ನನ್ನ ಅವಧಿಯಲ್ಲಿ ಅನೇಕ ಯೋಜನೆಗಳನ್ನು ರೂಪಿಸಿದ್ದೇನೆ ಅವುಗಳನ್ನು ಮುಂದೆ ಬರುವ ಕುಲಪತಿಗಳು ನಡೆಸಿಕೊಂಡು ಹೋಗಬೇಕು ಎಂದು ತಿಳಿಸಿದರು. ಕಾರ್ಯಕ್ರಮವನ್ನು ಡಾ. ರಾಮಕೃಷ್ಣ ಭಟ್ಟರವರು ನಿರೂಪಿಸಿದರು. ಕಾರ್ಯಕ್ರಮವನ್ನು ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿತ್ತು.

## Karnataka Samskrit University Celebrates National Library Week

**A brief report by Dr. Kavita Biradar**

National Library Week is an annual celebration highlighting the valuable role libraries, librarians, and library workers play in transforming lives and strengthening our communities. Library week celebration is a boost to promote the reading habits among the students.

Since 1968 ILA (Indian Library Association) declared 14-20 November as National Library week which is celebrated all over India. Various programmes are organized to let the public know about the libraries.

Andhra Pradesh Library Association organized an All India Library Meeting in 12 November 1912 in Madras. This meeting lead to the forming of Indian Library Association. Later ILA declared 14 November as National Library Day. Since 1968, 14-20 November has been celebrated as National Library Week all over India and various programs are organized.

On the occasion of National Library Week, Karnataka Samskrit University Central Library has organized a special lecture programme on the topic" Scholarly Communication in Digital Landscape: Teaching, Learning & Research Resources in Sanskrit" through online mode on 17th Nov 2022. More than 250 members including students, research scholars, faculty members, Sanskrit enthusiasts have registered and participated in the lecture. A positive feedback has been received from all the participants and has requested the library staff to conduct more such programmes to enlighten them about the online resources available to them in samskrit which aids them for teaching, learning and research.

# ವಿಶ್ವವಿದ್ಯಾಲಯದ ಸಂವಿಧಾನ ದಿನಾಚರಣೆ

**ಡಾ. ಗೋವಿಂದ**
**ಉಪ ನಿರ್ದೇಶಕರು**



ದಿನಾಂಕ:26.11.2022ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ “ಭಾರತ ಪ್ರಜಾಪ್ರಭುತ್ವದ ತಾಯಿ” ಎಂಬ ವಿಷಯದಲ್ಲಿ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಪ್ರಭಾರಿ ಕುಲಪತಿಗಳಾದ ಪ್ರೊ. ವಿ. ಗಿರೀಶ್‌ಚಂದ್ರರವರು ವಹಿಸಿದ್ದರು. “ಭಾರತ ಪ್ರಜಾಪ್ರಭುತ್ವದ ತಾಯಿ” ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಡಾ. ಅನುಪಮಾ, ಸಹಾಯಕ ಪ್ರಾಧ್ಯಾಪಕರು, ಕಸಂವಿ ಇವರು ನೀಡಿದರು. ಪ್ರಸ್ತಾವಿಕ ನುಡಿಯನ್ನು ಕುಲಸಚಿವರಾದ ಪ್ರೊ. ವೀರನಾರಾಯಣ ಪಂಡುರಂಗಿಯವರು ನುಡಿದರು.

ಅಧ್ಯಕ್ಷಸ್ಥಾನವನ್ನಲಂಕರಿಸಿ ಮಾತನಾಡುತ್ತಾ ಪ್ರೊ. ಗಿರೀಶ್‌ಚಂದ್ರರವರು ಭಾರತದ ಸಂವಿಧಾನವು ಹಲವು ವಿಚಾರಗಳನ್ನೊಳಗೊಂಡಂತಹ ಹಾಗೂ ಎಲ್ಲಾ ಸಮುದಾಯದ ಏಳಿಗೆಯನ್ನು ಬಯಸುವಂತಹದ್ದಾಗಿದೆ. ಡಾ. ಬಿ. ಆರ್. ಅಂಬೇಡ್ಕರ್‌ರವರ ಅಪೇಕ್ಷೆಯಂತೆ ಸರ್ವರಿಗೂ ಸಮಾನವಾದ ಹಕ್ಕನ್ನು ನೀಡಲಾಗಿದೆ, ಸ್ತ್ರೀಯರಿಗೆ, ಅಬಲರಿಗೆ, ಹಿಂದುಳಿದವರಿಗೆ ಹೀಗೆ ಎಲ್ಲರಿಗೂ ಸಮಾನವಾದ ಹಕ್ಕನ್ನು ನೀಡಿದೆ. ಸಂವಿಧಾನದ ರಚನೆಯ ನಂತರ ಭಾರತದೇಶವು ಸರ್ವತೋಮುಖವಾಗಿ ಅಭಿವೃದ್ಧಿಯನ್ನು ಹೊಂದುತ್ತಿದೆ. ದೀನ, ದಲಿತರ ಬೆಳಕಾಗಿದೆ. ಸಂವಿಧಾನವೂ ಪ್ರತಿಯೊಬ್ಬ ಭಾರತೀಯ ಪ್ರಜೆಯ ಹಿತವನ್ನು ಕಾಪಾಡುವಂತಹದ್ದಾಗಿದೆ. ಹಾಗಾಗಿ ನಾವು ಸಂವಿಧಾನವನ್ನು ಅಧ್ಯಯನ ಮಾಡಿ ತಿಳಿದುಕೊಳ್ಳಬೇಕು ಹಾಗೂ ಗೌರವಿಸಬೇಕು ಎಂದರು.

ಉಪನ್ಯಾಸವನ್ನು ಮಾಡುತ್ತಾ ಡಾ. ಅನುಪಮಾರವರು ವಿಶ್ವದ ಅತ್ಯಂತ ದೊಡ್ಡದಾದ ಪ್ರಜಾಪ್ರಭುತ್ವದ ದೇಶವೆಂದರೆ ಅದು ಭಾರತವೇ ಆಗಿದೆ. ಇಂತಹ ಹೆಚ್ಚು ಜನಸಂಖ್ಯೆಯುಳ್ಳ ಭಾರತದೇಶವು ಸರ್ವರನ್ನು ಸಮಾನವಾಗಿ ಕಾಣುವ ತಾಯಿಯಾಗಿದೆ. ಭಾರತಮಾತೆಯ ಈ

ಮಂಡಿಲಲ್ಲಿ ಕೋಟ್ಯಂತರ ಮಕ್ಕಳು ಜೀವಿಸುತ್ತಿದ್ದಾರೆ. ಭಾರತಮಾತೆಯ ಋಣವನ್ನು ತೀರಿಸಲು ಸಾಧ್ಯವಿಲ್ಲ ಅಂತಹ ತಾಯಿಯ ಋಣ ನಮ್ಮೆಲ್ಲರ ಮೇಲಿದೆ. ದೇಶ ಸೇವೆಯ ಮಾಡುವ ಮುಖಾಂತರ ಆ ತಾಯಿಯ ಋಣವನ್ನು ತೀರಿಸಬೇಕು. ಬಹುಜನರನ್ನೊಳಗೊಂಡಂತಹ, ಬಹುಸಂಸ್ಕೃತಿಯನ್ನೊಳಗಂಡಂತಹ, ಬಹುಧರ್ಮಗಳನ್ನೊಳಗೊಂಡಂತಹ, ವೈವಿಧ್ಯಮಯವಾಗಿರುವ ಈ ನಮ್ಮ ನಾಡು ಭರತಭೂಮಿಯಾಗಿದೆ. ಹಾಗಾಗಿ ಹೆಚ್ಚು ಜನಸಂಖ್ಯೆಯುಳ್ಳ ಈ ನಮ್ಮ ದೇಶವು ವಿಶ್ವದ ತಾಯಿಯಾಗಿದೆ. ವಿಶ್ವದ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳ ಮಾತೆಯಾಗಿದೆ. ನಮ್ಮ ಸಂಸ್ಕೃತಿ "ಅತಿಥಿದೇವೋಭವ" ಎನ್ನುವ ಹಾಗೆ ಆಗತರನ್ನು ಸತ್ಕರಿಸುವ ಸಂಸ್ಕೃತಿಯಾಗಿದೆ. ಈ ರೀತಿಯಾದಂತಹ ಸಂಸ್ಕೃತಿ ವಿಶ್ವದ ಯಾವ ಭಾಗದಲ್ಲಿಯೂ ಸಿಗಲೂ ಸಾಧ್ಯವಿಲ್ಲ. ಗುರುಹಿರಿಯರನ್ನು ಗೌರವಿಸುವ, ತಂದೆತಾಯಿಗಳನ್ನು ದೇವರಂತೆ ಕಾಣುವ ಭೂಮಿ ನಮ್ಮದಾಗಿದೆ. ಮಾತೃದೇವೋಭವ, ಪಿತೃದೇವೋಭವ ಎಂಬುವ ನುಡಿಗಳು ಭಾರತದ ಪ್ರಜೆಗಳ ಕಣಕಣದಲ್ಲಿಯೂ ಅಡಗಿದೆ ಎಂಬುದಾಗಿ ತಿಳಿಸಿದರು.

ಪ್ರಸ್ತಾವಿಕ ನುಡಿಯನ್ನು ನುಡಿಯುತ್ತಾ ಪ್ರೊ. ವೀರನಾರಾಯಣ ಪಾಂಡುರಂಗಿರವರು ಸಂವಿಧಾನವು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ಒಂದು ದೈವಿಕ ಮಾರ್ಗವಿದ್ದಂತೆ, ಸಂವಿಧಾನವೂ ದೇಶದ ಹಾಗೂ ಸಮಾಜದ ಹಿತವನ್ನು ಕಾಪಾಡುತ್ತದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ಪ್ರಸಾರಮಾಡಲಾಗಿತ್ತು, ಕರ್ನಾಟಕದ ವಿವಿಧ ಭಾಗಗಳಿಂದ ಶ್ರೋತೃಗಳು ಭಾಗವಹಿಸಿದ್ದರು, ಕಸಂವಿಯ ವಿವಿಧ ಅಧಿಕಾರಿಗಳು, ಪ್ರಾಧ್ಯಾಪಕರುಗಳು, ನೌಕರುಗಳು, ವಿದ್ಯಾರ್ಥಿಗಳು ಆನ್‌ಲೈನ್ ಹಾಗೂ ಮುಖತಃ ಮುಖಾಂತರ ಭಾಗವಹಿಸಿದ್ದರು.



ಆಸ್ಟ್ರಿಯ ದೇಶದ ಅಲ್ಲಿನ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಮೈಕೆಲ್‌ರವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಬೇಟಿ ನೀಡಿದ ಸಂದರ್ಭ, ಮಾನ್ಯ ಕುಲಪತಿಗಳು ಡಾ. ಮೈಕೆಲ್ ರವರನ್ನು ತತ್ವಚಿಂತಾಮಣಿ ಪುಸ್ತಕವನ್ನು ನೀಡುವ ಮೂಲಕ ಸನ್ಮಾನಿಸಿದರು.

# ಸೋಂದಾ ಸ್ವರ್ಣವಲ್ಲಿಯಲ್ಲಿ ರಾಜ್ಯಮಟ್ಟದ ಸಂಸ್ಕೃತೋತ್ಸವ

ಸಂಸ್ಕೃತ ಭಾಷೆಯನ್ನು ದೂರಮಾಡಿದ್ದರಿಂದ ಸಾಂಸ್ಕೃತಿಕ ಪತನಕ್ಕೆ ಕಾರಣವಾಗಿದೆ. ಎಂದು ಸೋಂದಾ ಸ್ವರ್ಣವಲ್ಲೀ ಸಂಸ್ಥಾನದ ಮಠಾಧೀಶರಾದ ಶ್ರೀಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು ಕಳವಳ ವ್ಯಕ್ತಪಡಿಸಿದರು.

ಅವರು ಶನಿವಾರ ಸೋಂದಾ ಸ್ವರ್ಣವಲ್ಲೀ ಸಂಸ್ಥಾನ ನಡೆಸುವ ಶ್ರೀರಾಜರಾಜೇಶ್ವರೀ ಸಂಸ್ಕೃತ ಮಹಾವಿದ್ಯಾಲಯದ ಆಶ್ರಯದಲ್ಲಿ ಎರಡು ದಿನಗಳ ರಾಜ್ಯ ಮಟ್ಟದ ಸಂಸ್ಕೃತೋತ್ಸವ ಹಾಗೂ ಎನ್.ಎಸ್.ಎಸ್ ದಿನಾಚರಣೆ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಾಂಸ್ಕೃತಿಕ ಪತನವು ಮನೆ ಮನೆಗಳಲ್ಲಿ ಶಾಲೆ ಕಾಲೇಜುಗಳಲ್ಲಿ ಅಧಿಕಾರಿ, ಸರಕಾರದ ಹಂತದಲ್ಲೂ ಆಗುತ್ತಿದೆ. ಸಂಸ್ಕೃತವನ್ನು ನಾವು ದೂರ ಮಾಡಿರುವುದೇ ಇದಕ್ಕೆ ಕಾರಣವಾಗಿದೆ. ಎಂದು ವಿಶ್ಲೇಷಿಸಿದ ಶ್ರೀಗಳು, ಸಂಸ್ಕೃತ ಬಳಸಿದರೆ ಸಾಂಸ್ಕೃತಿಕ ಏಳ್ಗೆ ಹಾಗೂ ಸಂಸ್ಕಾರದ ಉಳಿವು ಆಗುತ್ತದೆ. ಎಂದರು.

ಅಷ್ಟು ಶಸ್ತ್ರಾಸ್ತ್ರ ಅಭ್ಯಾಸ ಮಾಡಿದರು ಅರ್ಜುನ ರಣರಂಗಕ್ಕೆ ಬಂದಾಗ ಆತನಿಗೆ ಭೀತಿ ಆವರಿಸಿತು. ಅದೇ ರೀತಿ ಕೆಲವೊಮ್ಮೆ ಸ್ಪರ್ಧಾಳುಗಳಿಗೂ ಸ್ಪರ್ಧೆಗೆ ಬಂದಾಗ ಭೀತಿ ಆವರಿಸುವುದುಂಟು. ಈ ಭೀತಿ ಹೋಗಲಾಡಿಸಲು ಧ್ಯಾನ, ಶ್ಲೋಕ, ಸ್ತೋತ್ರ ಉಪಾಸನೆ ಮಾಡಿದರೆ ಇದನ್ನು ಹೋಗಲಾಡಿಸಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಮತ್ತೂರಿನ ಅಗ್ನಿಹೋತ್ರಿ ಡಾ. ಎಂ. ಎಸ್ ಸನತ್‌ಕುಮಾರ್ ಸೋಮಯಾಜಿರವರಿಗೆ “ವೇದನಾದಸುಧಾ” ಎಂಬ ಬಿರುದು ನೀಡಿ ಗೌರವಿಸಲಾಯಿತು. ಅಗ್ನಿಹೋತ್ರಿ ಡಾ. ಎಂ. ಎಸ್ ಸನತ್‌ಕುಮಾರ್ ಸೋಮಯಾಜಿರವರು ವೇದನಾದಸುಧಾ ಬಿರುದು ಸ್ವೀಕರಿಸಿ ಮಾತನಾಡಿ ಸಂಸ್ಕೃತ ಸಂಭಾಷಣೆಯಿಂದ ನಮ್ಮ ಬುದ್ಧಿ ಚುರುಕಾಗುತ್ತದೆ ಎಂದರು.

# ರಾಜ್ಯಮಟ್ಟದ ಶಾಸ್ತ್ರೀಯ ಸ್ಪರ್ಧೆಗಳು ಹಾಗೂ ಕಸಂವಿಯ ನೂತನ ಜಾಲಪುಟ ಲೋಕಾರ್ಪಣೆ

**ವಿದ್ವಾನ್ ಹೇಮರಾಜ. ಎನ್. ಎಸ್**
ಸಂಶೋಧನಾ ಸಹಾಯಕರು



ದಿನಾಂಕ: 07.01.2023ರಂದ ದಿನಾಂಕ;08.01.2023ರವರೆಗೆ ಎರಡು ದಿವಸಗಳ ಕಾಲ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ರಾಜ್ಯಮಟ್ಟದ ಶಾಸ್ತ್ರೀಯ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ಮಹಾವಿದ್ಯಾಲಯಗಳೂ, ಸಂಶೋಧನಾ ಸಂಸ್ಥೆಗಳು ಹಾಗೂ ಅಧ್ಯಯನ ಸಂಸ್ಥೆಗಳಿಂದ ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

1. ಅಲಂಕಾರ,
2. ವ್ಯಾಕರಣ,
3. ನ್ಯಾಯ,
4. ಮೀಮಾಂಸಾ,
5. ಜ್ಯೋತಿಷ್ಯ,
6. ಧರ್ಮ,
7. ವೇದಾಂತ,
8. ವೇದಭಾಷಣ,
9. ಜೈನ–ಬೌದ್ಧ
10. ಭಾಷಣ,
11. ಸಾಂಖ್ಯಯೋಗಭಾಷಣ,
12. ಭಾರತೀಯ ವಿಜ್ಞಾನ ಭಾಷಣ
13. ವ್ಯಾಕರಣಶಲಾಕಾ
14. ಸಾಹಿತ್ಯ ಶಲಾಕಾ
15. ಕಾವ್ಯಶಲಾಕಾ
16. ಧಾತುಕಂಠಪಾಠಃ
17. ಜ್ಯೋತಿಷಶಲಾಕಾ
18. ಭಾರತೀಯಗಣಿತಶಲಾಕಾ
19. ಅಕ್ಷರಶ್ಲೋಕೀ
20. ಶಾಸ್ತ್ರಾರ್ಥವಿಚಾರಃ
21. ಪುರಾಣೇತಿಹಾಸಶಲಾಕಾ
22. ಅಮರಕೋಷಕಂಠಪಾಠಃ
23. ಕಾವ್ಯಕಂಠಪಾಠಃ
24. ಭಗವದ್ಗೀತಾಕಂಠಪಾಠಃ
25. ಅಷ್ಟಾಧ್ಯಾಯೀಕಂಠಪಾಠಃ
26. ಸುಭಾಷಿತಕಂಠಪಾಠಃ
27. ಸಮಸ್ಯಾಪೂರ್ತಿಃ
28. ಆಯುರ್ವೇದಭಾಷಣಮ್
29. ಮೀಮಾಂಸಾಶಲಾಕಾ
30. ಅರ್ಥಶಾಸ್ತ್ರಶಲಾಕಾ
31. ಶಾಸ್ತ್ರೀಯಸ್ಫೂರ್ತಿಸ್ಪರ್ಧಾ



ಹೀಗೆ ಅನೇಕ ಶಾಸ್ತ್ರಗಳ ವಿಷಯಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಗಳಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ದಿನಾಂಕ:07.01.2023ರಂದು ಬೆಳಿಗ್ಗೆ 9.30ಕ್ಕೆ ಉದ್ಘಾಟನಾ ಕಾರ್ಯಕ್ರಮವು ಆರಂಭವಾಯಿತು. ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಮುಖ್ಯಕಾರ್ಯದರ್ಶಿಗಳಾದ ಶ್ರೀಮತಿ ರಶ್ಮಿ ಮಹೇಶ್‌ರವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಕುಲಪತಿಗಳಾದ ಪ್ರೊ. ಗಿರೀಶ್‌ಚಂದ್ರರವರು ವಹಿಸಿದ್ದರು. ಕುಲಸಚಿವರಾದ ಪ್ರೊ ವೀರನಾರಾಯಣ ಪಾಂಡುರಂಗಿರವರು ಉಪಸ್ಥಿತರಿದ್ದರು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಉನ್ನತಶಿಕ್ಷಣ ಇಲಾಖೆಯ ಮುಖ್ಯಕಾರ್ಯದರ್ಶಿಗಳಾದ ಶ್ರೀಮತಿ ರಶ್ಮಿ ಮಹೇಶ್‌ರವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಉತ್ತಮವಾದ ಯೋಜನೆಗಳನ್ನು ರೂಪಿಸಿ ಉತ್ತಮವಾದ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಯಾವುದೇ ವಿಶ್ವವಿದ್ಯಾಲಯವೂ ಮಾಡದೆ ಇರುವ ಕಾರ್ಯವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ತನ್ನದೇ ಆದ ನೂತನ

ಜಾಲಪುಟವನ್ನು ಸಿದ್ದಪಡಿಸಿದೆ ಅದನ್ನು ಇಂದು ಲೋಕಾರ್ಪಣೆಯನ್ನೂ ಕೂಡ ಮಾಡಿದೆ. ಈ ರೀತಿಯಾಗಿ ಸ್ವಯಂ ನೂತನ ಜಾಲಪುಟವನ್ನೂ ಸಿದ್ದಪಡಿಸಿದ್ದು ದುಂದು ವೆಚ್ಚವನ್ನು ಕಡಿಮೆ ಮಾಡಿದೆ. ಇದರಿಂದ ಇಪ್ಪತ್ತರಿಂದ ಮುವತ್ತು ಲಕ್ಷದವರೆಗೆ ಹಣವು ಉಳಿದಿದೆ ಎಂದರು. ಈ ಸಂದರ್ಭದಲ್ಲಿ ಅನೇಕ ಸ್ಪರ್ಧೆಗಳನ್ನು ಆಯೋಜಿಸಿರುವಂತಹದ್ದು ಮತ್ತು ಬಹಳ ವಿದ್ಯಾರ್ಥಿಗಳೂ ಆಗಮಿಸಿರುವಂತಹದ್ದು ನನಗೆ ಬಹಳ ಖುಷಿಯನ್ನು ತಂದುಕೊಟ್ಟಿದೆ. ಹಾಗೆಯೇ 40ವರ್ಷಗಳಿಂದಲೂ ಕರ್ನಾಟಕದ ವಿದ್ಯಾರ್ಥಿಗಳೇ ರಾಷ್ಟ್ರಮಟ್ಟದಲ್ಲಿಯೂ ಹೆಚ್ಚು ಪದಕಗಳನ್ನು ಪಡೆದು ವಿಜಯವೈಜಯಂತೀ ಪುರಸ್ಕಾರವನ್ನು ಪಡೆಯುತ್ತಾ ಬಂದಿರುವುದು ತುಂಬಾ ಹೆಮ್ಮೆಯ ವಿಷಯ ಎಂದು ಹೇಳಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತುಂಬಾ ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡುತ್ತಾ ವಿವಿಧ ಯೋಜನೆಗಳಲ್ಲಿ ಮುಂದಿದೆ ಎಂದರು.



ಅಧ್ಯಕ್ಷತೆಯನ್ನು ವಹಿಸಿದ್ದಂತಹ ಪ್ರೊ ಗಿರೀಶ್‌ಚಂದ್ರರವರು ಮಾತನಾಡುತ್ತಾ, ಪ್ರತಿವರ್ಷದಂತೆ ಈ ವರ್ಷವೂ ಕೂಡ ರಾಜ್ಯಮಟ್ಟದ ಶಾಸ್ತ್ರೀಯ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕಳೆದ ಬಾರಿ ನಮ್ಮ ವಿಶ್ವವಿದ್ಯಾಲಯುದಲ್ಲಿಯೇ ರಾಷ್ಟ್ರಮಟ್ಟದ ಶಾಸ್ತ್ರೀಯ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು, ಕಳೆದ 40 ವರ್ಷಗಳಿಂದಲೂ ಕರ್ನಾಟಕದ ವಿದ್ಯಾರ್ಥಿಗಳೆ ವಿಜಯುವೈಜಯುಂತೀ ಪುರಸ್ಕಾರವನ್ನು ಪಡೆಯುತ್ತಾ ಬಂದಿದ್ದಾರೆ ಈ ವರ್ಷವೂ ನಮ್ಮ ವಿದ್ಯಾರ್ಥಿಗಳೇ ವಿಜಯುವೈಜಯುಂತೀ ಪುರಸ್ಕಾರವನ್ನು ಪಡೆಯಬೇಕು ಎಂದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯುದ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ರಶ್ಮಿ ಮಹೇಶ್ ರವರು ನೆರವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ ಇದು ಬಹಳ ಸಂತೋಷವನ್ನುಂಟುಮಾಡಿದೆ ಎಂದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸರಳ ವ್ಯಯವನ್ನು ಮಾಡುತ್ತಾ ಉತ್ತಮವಾದ ಕಾರ್ಯಯೋಜನೆಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿದೆ ಎಂದರು. ವಿಶ್ವವಿದ್ಯಾಲಯದ ಎಲ್ಲಾ ನೌಕರರು ಕಸಂವಿಯ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಹಿಸಿ ವಿಶ್ವವಿದ್ಯಾಲಯದ ಯಶಸ್ಸಿಗೆ ಶ್ರಮಿಸಿದ್ದಾರೆ ಎಂದು ಹೇಳಿದರು.



ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತಭಾಷಣವನ್ನು ಮಾಡುತ್ತಾ ಕುಲಸಚಿವರಾದ ಪ್ರೊ. ವೀರನಾರಾಯಣ ಪಾಂಡುರಂಗಿಯವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಪೂರ್ಣ ಮಾಹಿತಿಯನ್ನು ನೀಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಕಾರ್ಯಗಳ ಬಗ್ಗೆ ವಿವರಿಸಿದರು. ಕಸಂವಿಯಲ್ಲಿ ಹಾಗೂ ಅಧೀನ ಕಾಲೇಜುಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಡಾ. ರಾಘವರವರು ನಡೆಸಿಕೊಟ್ಟರು. ಕಾರ್ಯಕ್ರಮದ ಆರಂಭದಲ್ಲಿ ವೇದಘೋಷವನ್ನು ಮಾಡಿದರು ವೇದ ವಿದ್ಯಾರ್ಥಿಗಳು, ಶ್ರೀಮತಿ ವಿದುಷಿ ಸಾವಿತ್ರಿ ಪೂಜಾರಿಯವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಅಂತಿಮ ಘಟ್ಟವಾದ ವಂದನಾರ್ಪಣೆಯನ್ನು ಡಾ. ವೆಂಕಟನಾಥನ್‌ರವರು ನಡೆಸಿಕೊಟ್ಟರು.

# ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ ಸಂಘ(ರಿ)ವತಿಯಿಂದ ಸಾಮಾನ್ಯ ವಾರ್ಷಿಕ ಸಭೆ

**ಡಾ. ಮಲ್ಲನ ಗೌಡ**
ಸಹಾಯಕ ನಿರ್ದೇಶಕರು

ದಿನಾಂಕ:18.01.2023ರಂದು ಅಪರಾಹ್ನ:3:00ಗಂಟೆಗೆ ಸಾಮಾನ್ಯ ಸಭೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದ ಸಭಾಂಗಣದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ ಸಂಘ(ರಿ)ವತಿಯಿಂದ ಸಾಮಾನ್ಯ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಆರಂಭದಲ್ಲಿ ಡಾ. ನಾರಾಯಣಸ್ವಾಮಿಯವರು ಪ್ರಾರ್ಥನೆಯನ್ನು ಮಾಡಿದರು. ಸಭೆಯಲ್ಲಿ ಆಸೀನರಾಗಿದ್ದಂತಹ ಎಲ್ಲ ಸದಸ್ಯರನ್ನು ಪರೀಕ್ಷಾ ನಿಯಂತ್ರಕರಾದ ಡಾ. ರಾಮಕೃಷ್ಣ ಭಟ್ಟರವರು ಸ್ವಾಗತಿಸಿದರು. ಸಭೆಯ ಆಶಯ ಹಾಗೂ ಸಂಘದ ಕಾರ್ಯಕ್ರಮಗಳನ್ನು ಡಾ. ಋಷಿದೇವ ಭಾರ್ಗವ್‌ರವರು ವಿವರಿಸಿದರು. ಸಭೆಯ ಸಭಾಪತಿ ಸ್ಥಾನವನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಾಲಯ್ಯರವರು ವಹಿಸಿದ್ದರು. ಉಪಸಭಾಪತಿಯಾಗಿ ವ್ಯಾಕರಣ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನುಪಮಾರವರು ವಹಿಸಿದ್ದರು.

ಈ ಸಭೆಯಲ್ಲಿ ನೌಕರರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಅನೇಕ ನೌಕರರು ಸಂಘದ ಕಾರ್ಯಕ್ರಮಗಳ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಸಭೆಯಲ್ಲಿ ನೌಕರರಿಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ನೌಕರರ ಕ್ಷೇಮಕ್ಕೋಸ್ಕರ ಚರ್ಚಿಸಿ ಕಾರ್ಯಗತಗೊಳಿಸಲು ತೀರ್ಮಾನಿಸಲಾಯಿತು. ವಿಶೇಷವಾಗಿ ಎಲ್ಲಾ ನೌಕರರ ಹಿತ ಕಾಪಾಡುವಲ್ಲಿ ಸಂಘವು ಬದ್ಧವಾಗಿದೆ ಎಂದು ನೌಕರರ ಸಂಘದ ಅಧ್ಯಕ್ಷರು ನುಡಿದರು. ಈ ಸಭೆಯಲ್ಲಿ ಕಾರ್ಯದರ್ಶಿಗಳಾದ ಡಾ. ಮಲ್ಲನ ಗೌಡರವರು ಉಪಸ್ಥಿತರಿದ್ದರು.

# "ಸೀಕ್ರೇಟ್ ಆಫ್ ಕಾರಕ ಇನ್ ಭಟ್ಟಿಕಾವ್ಯ" ವಿಷಯದಲ್ಲಿ ವಿಶೇಷೋಪನ್ಯಾಸ



ದಿನಾಂಕ: 20.01.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದ ಸಭಾಂಗಣದಲ್ಲಿ ಸಮಯ:3:30ಗಂಟೆಗೆ "ಸೀಕ್ರೇಟ್ ಆಫ್ ಕಾರಕ ಇನ್ ಭಟ್ಟಿಕಾವ್ಯ" ಎಂಬುವ ವಿಷಯವನ್ನು ಕುರಿತು ವಿಶೇಷೋಪನ್ಯಾಸವನ್ನು ಏರ್ಪಡಿಸಲಾಗಿತ್ತು. ಪ್ರೊ. ಪ್ರಮೋದ್ ಕುಮಾರ ಶರ್ಮಾ, ಸ್ಕೂಲ್ ಆಫ್ ಸಾನ್ಸ್ಕ್ರೀಟ್ ಅಂಡ್ ಇಂಡಿಕ್ ಸ್ಟಡೀಸ್, ಜವಹರಲಾಲ್ ನೆಹರು ವಿಶ್ವವಿದ್ಯಾಲಯ, ನವದೆಹಲಿ. ಇವರು ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವೀರನಾರಾಯಣ ಪಾಂಡುರಂಗಿರವರು ಉಪಸ್ಥಿತರಿದ್ದರು. ಅಧ್ಯಯನಾಂಗ ವಿಭಾಗದ ಉಪನಿರ್ದೇಶಕರಾದ ಡಾ. ಋಷಿದೇವ ಭಾರ್ಗವ್‌ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ "ಸೀಕ್ರೇಟ್ ಆಫ್ ಕಾರಕ ಇನ್ ಭಟ್ಟಿಕಾವ್ಯ" ಈ ವಿಷಯವನ್ನು ಉಪನ್ಯಾಸ ಮಾಡುತ್ತಾ ಭಟ್ಟಿಕಾವ್ಯದಲ್ಲಿರುವ ಕಾರಕ ವಿಚಾರಗಳ ಬಗ್ಗೆ ಮತ್ತು ಅವುಗಳ ಸೂಕ್ಷ್ಮಾಂಶಗಳ ಬಗ್ಗೆ ವಿವರಿಸಿದರು. ಭಟ್ಟಿಕಾವ್ಯವು ಸಂಸ್ಕೃತ ಸಾಹಿತ್ಯದಲ್ಲಿ ಅತ್ಯಂತ ಕಠಿನವಾದ ವ್ಯಾಕರಣಾಂಶಗಳಿಂದ ಕೂಡಿರುವ ಕಾವ್ಯವಾಗಿದೆ. ಈ ಕಾವ್ಯದಲ್ಲಿ ಆರು ಕಾರಕಗಳ ವಿವರಣೆಯನ್ನು ನೀಡಲಾಗಿದೆ. ಅವುಗಳ ಸಂಪೂರ್ಣ ವಿವರಣೆಯನ್ನು ನೀಡಿದರು. ಭಟ್ಟಿಕಾವ್ಯದಲ್ಲಿ ಅಡಗಿರುವ ಕಾರಕಾಂಶಗಳ ವಿಷಯಗಳನ್ನು ಉದಾಹರಣೆ ಸಹಿತವಾಗಿ ವಿವರಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿದ್ಯಾವಾರಿಧಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಸಂವಿಎು ಎಲ್ಲ ಪ್ರಾಧ್ಯಾಪಕರು, ಸಂಶೋಧನಾ ಸಹಾಯಕರು, ಬೋಧಕೇತರ ಸಿಬ್ಬಂಧಿಗಳು ಭಾಗವಹಿಸಿದ್ದರು. ಅನೇಕ ಸಂಸ್ಕೃತ ಶಾಸ್ತ್ರಪ್ರೇಮಿಗಳು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕಸಂವಿಯಲ್ಲಿ 74ನೇ ಗಣರಾಜ್ಯೋತ್ಸವಾಚರಣೆ

**ಡಾ. ಗೋವಿಂದ**
ಉಪ ನಿರ್ದೇಶಕರು



ದಿನಾಂಕ: 26.01.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ 74ನೇ ಗಣರಾಜ್ಯೋತ್ಸವದ ಆಚರಣೆಯುನ್ನು ಹಮ್ಮಿಕೊಳ್ಳಲಾಗಿತ್ತು. ಕುಪಲತಿಗಳಾದ ಪ್ರೊ. ಗಿರೀಶ್‌ಚಂದ್ರರವರು ಧ್ವಜಾರೋಹಣವನ್ನು ಮಾಡಿದರು. ಕುಲಸಚಿವರಾದ ಪ್ರೊ. ಪಾಲಯ್ಯರವರು ಉಪಸ್ಥಿತರಿದ್ದರು.

ಧ್ವಜಾರೋಹಣದ ನಂತರ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪಮಾಲೆಯನ್ನು ಹಾಕಿ ನಮಿಸಲಾಯಿತು. ವಿವಿಧ ಕಸಂವಿಯ ಅಧಿಕಾರಿಗಳು ಹಾಗೂ ಪ್ರಾಧ್ಯಾಪಕರು ಪುಷ್ಪಮಾಲೆಯನ್ನು ಹಾಕಿ ನಮಸ್ಕರಿಸಿದರು.

ಧ್ವಜಾರೋಹಣವನ್ನು ಮಾಡಿ ಮಾತನಾಡುತ್ತಾ ಪ್ರೊ ಗಿರೀಶ್‌ಚಂದ್ರರವರು ನಾವು ಇಂದು 74ನೇ ಗಣರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಅಖಂಡವಾದ ಭಾರತವನ್ನು ಭಾಷಾವಾರು ಪ್ರಾಂತಗಳಾಗಿ ಗುರುತಿಸಿ ಅವುಗಳನ್ನು ಪ್ರತ್ಯೇಕ ರಾಜ್ಯಗಳನ್ನಾಗಿ ವಿಂಗಡಿಸಿದಂತಹ ದಿನವಾಗಿದೆ. ಪ್ರತಿಯೊಂದು ಭಾರತೀಯ ಭಾಷೆಗೆ ಗೌರವವನ್ನು ನೀಡುವ ಸಲುವಾಗಿ ಆಯಾ ಭಾಷೆಯ ಪ್ರಾಂತದ ಜನರಿಗೆ ಗೌರವವನ್ನು ನೀಡಲು ಪ್ರತ್ಯೇಕ ರಾಜ್ಯಗಳನ್ನಾಗಿ ವಿಂಗಡಿಸಲಾಯಿತು. ಇಂತಹ ಒಂದು ದಿವಸವನ್ನು ಗಣರಾಜ್ಯೋತ್ಸವವನ್ನಾಗಿ ಆಚರಿಸಲಾಗುತ್ತಿದೆ.

ಪ್ರತಿವರ್ಷವೂ ಗಣರಾಜ್ಯೋತ್ಸವದ ಆಚರಣೆಯು ಸಂದರ್ಭದಲ್ಲಿ ದೇಶದ ಪ್ರಧಾನಿಗಳು ವಿಶ್ವದ ಒಂದು ಅತ್ಯಂತ ಆಪ್ತ ದೇಶದ ಅಧ್ಯಕ್ಷರನ್ನು ಅತಿಥಿಗಳಾಗಿ ಅಹ್ವಾನಿಸುವ ಸಂಪ್ರದಾಯವುಂಟು. ಅದರಂತೆ ಈವರ್ಷವೂ ಈಜಿಪ್ಟ್‌ನ ಅಧ್ಯಕ್ಷರನ್ನು ಆಹ್ವಾನಿಸಲಾಗಿದೆ. ಈ ಸಂದರ್ಭದಲ್ಲಿ ಈಜಿಪ್ಟ್‌ನ ಅಧ್ಯಕ್ಷರು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದರು.



ಹಾಗೆಯೇ ಪ್ರತಿವರ್ಷವೂ ಪದ್ಮಶ್ರೀ, ಪದ್ಮವಿಭೂಷಣ, ಪದ್ಮಭೂಷಣ ಪ್ರಶಸ್ತಿಗಳನ್ನು ಕೇಂದ್ರಸರ್ಕಾರವೂ ನೀಡುತ್ತಾ ಬಂದಿದೆ ಈವರ್ಷವೂ ವಿವಿಧಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಪದ್ಮಶ್ರೀ, ಪದ್ಮವಿಭೂಷಣ, ಪದ್ಮಭೂಷಣ ಪ್ರಶಸ್ತಿಗಳನ್ನು ನೀಡಲಾಗುವುದು. ಕರ್ನಾಟಕದ 6 ಜನರಿಗೆ ಪದ್ಮಭೂಷಣ ಘೋಷಣೆ ಮಾಡಿರುವುದು ಬಹಳ ಸಂತಸದ ಸಂಗತಿ ಎಂದರು.

ಹಾಗೆಯೇ ದೇಶದ ಎಲ್ಲಾ ರಾಜ್ಯಗಳು ಇಂದು ಉತ್ತಮವಾದ ಸ್ಥಿತಿಯಲ್ಲಿ ಅವುಗಳದ್ದೇ ಆದ ಆಚಾರ, ವಿಚಾರ, ಸಂಸ್ಕೃತಿಗಳಲ್ಲಿ ಸಾಗುತ್ತಿವೆ. ಇದರಿಂದ ಇಂದು ನಮ್ಮ ದೇಶ ವಿಶ್ವಮಟ್ಟದಲ್ಲಿ ಪೂಜ್ಯಸ್ಥಾನದಲ್ಲಿದೆ ಎಂದರು. ದೇಶದ ಅಭಿವೃದ್ಧಿಗೆ ಎಲ್ಲಾ ರಾಜ್ಯಗಳ ಕೊಡುಗೆ ಅಪಾರವಾದದ್ದು, ಭಾರತವು ಇಂದು ಪ್ರಜ್ವಲಿಸುತ್ತಿದೆ ತನ್ನದೇ ಆದ ಎಲ್ಲಾ ಕ್ಷೇತ್ರಗಳಲ್ಲೂ ಸ್ವಾವಲಂಬಿಯಾಗಿ ಪ್ರತಿಯೊಂದು ವಸ್ತುವು ಬಾರತದಲ್ಲಿಯೆ ಉತ್ಪನ್ನವಾಗುತ್ತಿದೆ ವಿಜ್ಞಾನ, ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳಲ್ಲು ಅಭಿವೃದ್ಧಿಯನ್ನು ಹೊಂದಿದೆ. ಹಾಗೆಯೇ ಇತರ ದೇಶಗಳಿಗೂ ಕೂಡ ಸಹಾಯವನ್ನು ಮಾಡುತ್ತಾ ತಾನು ಕೂಡ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ಪಾಲಯ್ಯರವರು ಮಾತನಾಡಿ ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ವಿಶ್ವವಿದ್ಯಾಲಯವನ್ನು ಉನ್ನತ ಮಟ್ಟಕ್ಕೆ ಏರಿಸಬೇಕು ಎಂದರು. ಈ ಸಂದರ್ಭದಲ್ಲಿ ಹಸ್ತಪ್ರತಿಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಹಾಗೂ ಸ್ಕೌಟ್ಸ್‌ನ ಸಂಯೋಜಕರಾದ ಡಾ. ಪ್ರಭುಸ್ವಾಮಿರವರು ಧ್ವಜಾರೋಹಣದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಮುಗಿದ ಮೇಲೆ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು, ವಿವಿಧ ಮಾಧ್ಯಮದವರು ಕೂಡ ಭಾಗವಹಿಸಿ ಕಾರ್ಯಕ್ರಮದ ಸಂಪೂರ್ಣ ಚಿತ್ರಣವನ್ನು ಚಿತ್ರೀಕರಿಸಿದರು.

# ಕಸಂವಿಯಲ್ಲಿ ರಥಸಪ್ತಮಿಯ ನಿಮಿತ್ತ ಸಾಮೂಹಿಕ ಸೂರ್ಯನಮಸ್ಕಾರ

**ವಿದ್ವಾನ್ ವಾಲ್ಮೀಕ ರಾಮ**
ಸಂಶೋಧನಾ ಸಹಾಯಕರು



ದಿನಾಂಕ:28.01.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಸಮಯ ಬೆಳಿಗ್ಗೆ11.00ಕ್ಕೆ ಯೋಗವಿದ್ಯಾರ್ಥಿಗಳಿಂದ ರಥಸಪ್ತಮಿಯ ನಿಮಿತ್ತವಾಗಿ ಸಾಮೂಹಿಕ ಸೂರ್ಯನಮಸ್ಕಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಯೋಗ ಕೋರ್ಸ್‌ನ ಸಂಯೋಜಕರಾದ ಡಾ. ಜಯರೇವಣ್ಣರವರು ವಿದ್ಯಾರ್ಥಿಗಳಿಗೆ ಸೂರ್ಯನಮಸ್ಕಾರದ ಬಗ್ಗೆ ವಿವರಿಸಿದರು.



ಈ ಸಂದರ್ಭದಲ್ಲಿ 100ಕ್ಕು ಅಧಿಕ ಯೋಗವಿದ್ಯಾರ್ಥಿಗಳು ಈ ಸೂರ್ಯನಮಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸೂರ್ಯನಮಸ್ಕಾರಕ್ಕೆ ಸಂಬಂಧಿಸಿದ ಆಸನಗಳನ್ನು ಮಾಡಿದರು.



ಈ ಸಂದರ್ಭದಲ್ಲಿ ಕಸಂವಿಯ ಎಲ್ಲಾ ಪ್ರಾಧ್ಯಾಪಕರು ಭಾಗವಹಿಸಿ ಸೂರ್ಯನಮಸ್ಕಾರವನ್ನು ಮಾಡಿದರು. ಸೂರ್ಯನಮಸ್ಕಾರವನ್ನ ಮಾಡಿ ಆರೋಗ್ಯವನ್ನು ಸದೃಢಪಡಿಸಿಕೊಂಡರು.




ಡಾ. ಜಂಬುರೇವಣ್ಣರವರು ಸೂರ್ಯನಮಸ್ಕಾರದಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿದರು. ಸೂರ್ಯನ ಕಿರಣಗಳು ಮನುಷ್ಯನ ಮೇಲೆ ಬಿದ್ದರೆ ಮನುಷ್ಯ ಆರೋಗ್ಯವಂತನಾಗಿ ದೀರ್ಘಾಯುಷ್ಯವನ್ನು ಹೊಂದುವವನಾಗುತ್ತಾನೆ. ಸೂರ್ಯ ನಮಸ್ಕಾರವು ಯೋಗಾಸನಗಳಲ್ಲಿ ಪ್ರಮುಖವಾದ ಒಂದು ಆಸನವಾಗಿದೆ, ಸೂರ್ಯೋದಯದ ಸೂರ್ಯನ ಕಿರಣಗಳು ಮನುಷ್ಯನ ನೇತ್ರಗಳ ಮೇಲೆ ಬಿದ್ದರೆ ದೃಷ್ಟಿಯು ಅತ್ಯಂತ ತೀಕ್ಷ್ಣವಾಗುತ್ತದೆ ಹಾಗೂ ದೃಷ್ಟಿಯು ದೋಷವಿದ್ದರೆ ನಿವಾರಣೆಯಾಗುತ್ತದೆ ಎಂದರು. ಅಂತಿಮವಾಗಿ ಕಾರ್ಯಕ್ರಮವು ಶಾಂತಿ ಮಂತ್ರದೊಂದಿಗೆ ಸಮಾಪ್ತಿಯಾಯಿತು.

# ಸುರತ್ಕಲ್‌ನ ಶ್ರೀನಿವಾಸ ವಿಶ್ವವಿದ್ಯಾಲಯದಲ್ಲಿ ವಿಶ್ವಸಂಸ್ಕೃತ ಸಮ್ಮೇಳನ

**ಡಾ. ನಾರಾಯಣಸ್ವಾಮಿ. ಎಮ್. ಎಸ್**
ಸಂಶೋಧನಾ ಸಹಾಯಕರು



ಮಂಗಳೂರಿನ ಸುರತ್ಕಲ್‌ನ ಮುಕ್ಕ ಕ್ಯಾಂಪಸ್‌ನಲ್ಲಿ ವಿಶ್ವಸಂಸ್ಕೃತ ಸಮ್ಮೇಳನವು ದಿನಾಂಕ:23.02.2023ರಿಂದ ದಿನಾಂಕ:26.02.2023ರವರೆಗೆ ಶ್ರೀನಿವಾಸ ವಿಶ್ವವಿದ್ಯಾಲಯದಲ್ಲಿ ನಡೆಯಿತು.

ವಿಶ್ವಸಂಸ್ಕೃತ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶ್ರೀನಿವಾಸ ವಿಶ್ವವಿದ್ಯಾಲಯದ ಗೌರವ ಕುಲಪತಿಗಳಾದ **ಡಾ. ರಾಘವೇಂದ್ರರಾವ್‌ರವರು** ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನವದೆಹಲಿಯಲ್ಲಿರುವ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ **ಪ್ರೊ. ಶ್ರೀನಿವಾಸ ವರಖೇಡಿಯವರು** ಉಪಸ್ಥಿತರಿದ್ದರು. ವಿಶೇಷಾಹ್ವಾನಿತರಾಗಿ ಶ್ರೀನಿವಾಸ ವಿಶ್ವವಿದ್ಯಾಲಯದ ಸಹಕುಲಪತಿಗಳಾದ ಡಾ. ಎ. ಶ್ರೀನಿವಾಸರಾವ್‌ರವರು ಉಪಸ್ಥಿತರಿದ್ದರು. **ಡಾ. ವಿಠ್ಠಲ ಜೋಷಿರವರು, ಶ್ರೀಮತಿ ವಿಜಯಲಕ್ಷ್ಮೀ ಆರ್ ರಾವ್‌ರವರು, ಪ್ರೊ.** ಇ. ಆರ್. ಶ್ರೀಮತಿ. ಎ **ಮಿತ್ರ. ಎಸ್ ರಾವ್‌ರವರು, ಶ್ರೀಮತಿ ಪದ್ಮಿನೀ ಕುಮಾರ್‌ರವರು, ಡಾ. ಉದಯಕುಮಾರ್ ಮಯ್ಯರವರು, ಡಾ. ಪಿ. ಎಸ್. ಐತಾಳರವರು,** ಉಪಸ್ಥಿತರಿದ್ದರು.

ದಿನಾಂಕ:24.02.2023ರಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀನಿವಾಸ ವಿಶ್ವವಿದ್ಯಾಲಯದ ಗೌರವ ಕುಲಪತಿಗಳಾದ **ಡಾ. ರಾಘವೇಂದ್ರ ರಾವ್‌ರವರು** ವಹಿಸಿದ್ದರು. ಉದ್ಘಾಟಕರಾಗಿ ಬ್ಯಾಂಕ್ ಆಫ್ ಮಹಾರಾಷ್ಟ್ರದ ಪುಣೆ ಪ್ರಾಂತ್ಯದ ಮುಖ್ಯಸ್ಥರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಆದ **ಎ. ಎಸ್. ರಾಜೀವ್‌ರವರು** ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾದ **ನಳೀನ್ ಕುಮಾರ್ ಕಟೀಲ್‌ರವರು** ಹಾಗೂ ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕರಾದ **ಡಾ. ಭರತ ಶೆಟ್ಟಿರವರು,** ಹಾಗೂ ಬ್ಯಾಂಕ್ ಆಫ್ ಮಹಾರಾಷ್ಟ್ರದ ಕಾರ್ಯಕಾರಿ ನಿರ್ದೇಶಕರಾದ ಆಶೀಷ್ ಪಾಂಡೆಯವರು, **ಡಾ. ವೆಂಕಟರಮಣ ಅಕ್ಕರಾಜುರವರು,** ಹಾಗೂ ಬ್ಯಾಂಕ್ ಆಫ್ ಮಹಾರಾಷ್ಟ್ರದ ಕಾರ್ಯಕಾರಿ ನಿರ್ದೇಶಕರಾದ ಎ. ಬಿ. ವಿಜಯ್ ಕುಮಾರ್‌ರವರು ಉಪಸ್ಥಿತರಿದ್ದರು.



ದಿನಾಂಕ:25.02.2023ರಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀನಿವಾಸ ವಿಶ್ವವಿದ್ಯಾಲಯದ ಗೌರವ ಕುಲಪತಿಗಳಾದ **ಡಾ. ರಾಘವೇಂದ್ರರಾವ್‌ರವರು** ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನ್ಯಾಷನಲ್ ಮಿಷನ್‌ನ ನಿರ್ದೇಶಕರಾದ **ಡಾ. ಅನಿರ್ಬಾನ್ ದಾಶ್‌ರವರು, ಭಕ್ತಿ ರಾಘವ ಮಹಾರಾಜ್‌ರವರು,** ಮಂಗಳೂರು ಸಿಟಿಯ ದಕ್ಷಿಣ ವಿಭಾಗದ **ಡಾ. ವೇದವ್ಯಾಸ ಕಾಮತ್‌ರವರು** ಹಾಗೂ ಉಳ್ಳಾಲ ಹಾಗೂ ಬೊಲ್ಯಾರ್ ಕ್ಷೇತ್ರದ ಶಾಸಕರಾದ **ಶ್ರೀ ಯು. ಟಿ. ಖಾದರ್‌ರವರು,** ವಿಶೇಷಾಹ್ವಾನಿತರಾಗಿ ಶ್ರೀನಿವಾಸ ವಿಶ್ವವಿದ್ಯಾಲಯದ ಸಹಕುಲಪತಿಗಳಾದ **ಡಾ. ಎ. ಶ್ರೀನಿವಾಸ ರಾವ್‌ರವರು** ಹಾಗೂ ಇನ್ನೂ ಅನೇಕ ಗಣ್ಯ ಹಾಗೂ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಗೌರವ ಅತಿಥಿಗಳಾಗಿ ಭಾರತದ ವಿವಿಧ ರಾಜ್ಯಗಳ ಸಂಸ್ಕೃತ ವಿಶ್ವವಿದ್ಯಾಲಯಗಳ ಹಾಗೂ ಬೇರೆ ವಿಶ್ವವಿದ್ಯಾಲಯಗಳ ಕುಲಪತಿಗಳು ಆಗಮಿಸಿದ್ದರು.

ಈ ಸಮ್ಮೇಳನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಮಳಿಗೆಯನ್ನು ಸ್ಥಾಪಿಸಲಾಗಿತ್ತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿವಿಧ ಕಾರ್ಯಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು. ಹಾಗೆಯೇ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಾಶನವಾದ ಪುಸ್ತಕಗಳನ್ನು ಮಾರಾಟಮಾಡಲಾಯಿತು. ಈ ಸಂದರ್ಭದಲ್ಲಿ ವಿಶ್ವಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ಸಹೃದಯ ಮಹಾಶಯರು ಹಾಗೂ ಸಂಸ್ಕೃತ ಪ್ರೇಮಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಯೋಜನೆಗಳನ್ನು ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸಿದರು. ಪುಸ್ತಕಗಳನ್ನು ಖರೀದಿಸಿ ಉತ್ತಮವಾದ ಮಾತುಗಳನ್ನು ಆಡಿದರು. ಈ ಸಂದರ್ಭದಲ್ಲಿ ಕುಲಪತಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗಿತ್ತು. ಕುಲಪತಿಗಳು ಈ ಕಾರ್ಯಕ್ರಮದಲ್ಲಿ ಅತ್ಯಂತ ಸಂತೋಷದಿಂದ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಕಾರ್ಯಕ್ರಮವು ಯಶಸ್ವಿಯಾಗಲು ಕಾರಣರಾದರು. ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಳಿಗೆಯನ್ನು ಸ್ಥಾಪಿಸಲು ಪ್ರತಿನಿಧಿಗಳಾಗಿ ಪ್ರಸಾರಾಂಗದ **ಉಪನಿರ್ದೇಶಕರಾದ ಡಾ. ಗೋವಿಂದರವರು ಹಾಗೂ ಸಂಶೋಧನಾ ಸಹಾಯಕರಾದ ಡಾ. ನಾರಾಯಣಸ್ವಾಮಿ ಎಂ. ಎಸ್ ರವರು ಭಾಗವಹಿಸಿದ್ದರು.** ಕಾರ್ಯಕ್ರಮದ ನಾಲ್ಕು ದಿನಗಳೂ ಕೂಡ ಅನವರತವಾಗಿ ಮಳಿಗೆಯ ಕಾರ್ಯವನ್ನು ನಿರ್ವಹಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಚಾರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಪುಸ್ತಕಗಳ ಪ್ರದರ್ಶನವನ್ನು ಅತ್ಯುತ್ತಮವಾಗಿ ಮಾಡಿದರು.

ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ವಿವಿಧ ವಿದ್ವಾಂಸರುಗಳ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ವಿವಿಧ ರಾಜ್ಯಗಳಿಂದ ವಿವಿಧ ಸಂಸ್ಕೃತ ವಿದ್ವಾಂಸರು ಭಾಗವಹಿಸಿ ತಮ್ಮ ಉಪನ್ಯಾಸವನ್ನು ನೀಡಿದರು. ಭಾರದಾದ್ಯಂತ ಇರುವ ಅನೇಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಸಂಶೋಧನಾ ವಿದ್ಯಾರ್ಥಿಗಳು ಉಪನ್ಯಾಸವನ್ನು ಕೇಳಲು ಆಗಮಿಸಿದ್ದರು. ವಿವಿಧ ವಿಷಯಗಳಲ್ಲಿ **ಸಂಶೋಧನಾ ಲೆಖನಗಳನ್ನು ಮಂಡಿಸಲು ಆಹ್ವಾನಿಸಲಾಗಿತ್ತು,** ಅನೇಕ ಸಂಶೋಧಕರು ಅನೇಕ ವಿಷಯಗಳಲ್ಲಿ ಶೋಧ ಲೇಖನಗಳನ್ನು ಸಿದ್ಧಪಡಿಸಿ ಮಂಡಿಸಿದರು. ಹಾಗೆಯೇ **ವಿಚಾರ ಗೋಷ್ಠಿಯನ್ನು ಆಯೋಜಿಸಲಾಗಿತ್ತು** ವಿವಿಧ ವಿಷಯಗಳಲ್ಲಿ ಸಂಸ್ಕೃತ ವಿದ್ವಾಂಸರಾದ ಉಪನ್ಯಾಸಕರನ್ನು ಆಹ್ವಾನಿಸಿ ಉಪನ್ಯಾಸವನ್ನು



ನೀಡಲಾಗಿತ್ತು. ವಿಚಾರಗೋಷ್ಠಿಗಳು ಅತ್ಯಂತ ವಿಶೇಷವಾಗಿ ನಡೆದವು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ದೇಶದ ವಿವಿಧ ಭಾಗಗಳಿಂದ ವಿಶ್ವವಿದ್ಯಾಲಯಗಳಿಂದ ಮತ್ತು ಸಂಶೋಧನಾ ಸಂಸ್ಥೆಗಳಿಂದ ವಿದ್ಯಾರ್ಥಿಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## 2023ನೇ ಸಾಲಿನ ಗೋಡೆ ಕ್ಯಾಲೆಂಡರ್ ಲೋಕಾರ್ಪಣೆ



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2023ನೇ ಸಾಲಿನ **ಗೋಡೆಕ್ಯಾಲೆಂಡರ್**ನ್ನು ದಿನಾಂಕ03.01.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಬಿಡುಗಡೆ ಗೊಳಿಸಲಾಯಿತು. ಪ್ರತಿವರ್ಷವೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗೋಡೆಕ್ಯಾಲೆಂಡರ್‌ನ್ನು ಮುದ್ರಿಸಿ ಕಸಂವಿಯ ವಿವಿಧ ಕಾರ್ಯಕ್ರಮಗಳ ವರದಿಯ ಚಿತ್ರಗಳನ್ನು **ಗೋಡೆಕ್ಯಾಲೆಂಡರ್**ನಲ್ಲಿ ಅಳವಡಿಸಿ ಕಸಂವಿಯ ಕಾರ್ಯಸಾಧನೆಗಳನ್ನು ಬಿಂಬಿಸುವ ಚಿತ್ರಗಳೊಂದಿಗೆ ಗೋಡೆಕ್ಯಾಲೆಂಡರ್‌ನ್ನು ಮುದ್ರಿಸಲಾಗುತ್ತಿತ್ತು. ಕಸಂವಿಯ ಅನೇಕ ಸಾಧನೆಗಳನ್ನು ಚಿತ್ರಗಳ ಮೂಲಕ ತೋರಿಸಲಾಗುತ್ತಿತ್ತು. ಅದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಗಿರೀಶ್‌ಚಂದ್ರರವರು **2023ನೇ ಸಾಲಿನ ಗೋಡೆಕ್ಯಾಲೆಂಡರ್‌ನ್ನು** ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ವೀರನಾರಾಯಣ ಪಾಂಡುರಂಗಿರವರು ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಾಲಯ್ಯರವರು ಉಪಸ್ಥಿತರಿದ್ದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**ವಿದ್ವಾನ್ ಹೇಮರಾಜ.ಎನ್.ಎಸ್**
ಸಂಶೋಧನಾ ಸಹಾಯಕರು



ದಿನಾಂಕ:08.03.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಲ್‌ನಲ್ಲಿ **"ಮಹಿಳಾ ದಿನಾಚರಣೆ"**ಯನ್ನು ಆಚರಿಸಲಾಯಿತು. ಮಹಿಳಾ ದಿನಾಚರಣೆಯ ಅಂಗವಾಗಿ **"ಸಾಹಿತ್ಯದಲ್ಲಿ ಮಹಿಳಾ ದನಿ"** ಎಂಬುವ ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸವನ್ನು ನೀಡಲು **ಡಾ. ಕೆ. ಸಂಧ್ಯಾರೆಡ್ಡಿಯವರು** ಆಗಮಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕುಲಪತಿಗಳಾದ **ಪ್ರೊ. ಗಿರೀಶ್ಚಂದ್ರರವರು** ನೆರವೇರಿಸಿದರು. ವಿಶೇಷಾತಿಥಿಗಳಾಗಿ **ಡಾ. ಜಯಲಕ್ಷ್ಮೀ ರವರು,** ಹಣಕಾಸು ಅಧಿಕಾರಿಗಳು ಕಸಂವಿ ಇವರು ಆಗಮಿಸಿದ್ದರು. ಕುಲಸಚಿವರಾದ ಪ್ರೊ. ಪಾಲಯ್ಯರವರು ವಿಶೇಷೋಪಸ್ಥಿತಿಯನ್ನು ಹೊಂದಿದ್ದರು.

ಕಾರ್ಯಕ್ರಮದಲ್ಲಿ ವಿಶೇಷೋಪನ್ಯಾಸಕರಾಗಿ ಆಗಮಿಸಿದ್ದಂತಹ ಡಾ. ಸಂಧ್ಯಾರೆಡ್ಡಿಯವರು ಮಾತನಾಡುತ್ತಾ ಮಹಿಳೆಯರಿಗೆ ಗೌರವ ಸಿಗುತ್ತಿದೆ, ಪರಿಪೂರ್ಣವಾಗಿ ಸ್ವಾತಂತ್ರ್ಯವನ್ನು ನೀಡಿದ್ದೇವೆ ಎಂದು ಸಭೆ ಸಮಾರಂಭಗಳಲ್ಲಿ ಭಾಷಣವನ್ನು ಮಾಡುತ್ತಾರೆ ಆದರೆ ಇದುವರೆಗೂ ಕೂಡ ಮಹಿಳೆಯರಿಗೆ ಗೌರವವನ್ನ ಪುರುಷರು ನೀಡಿಲ್ಲ. ಅವರನ್ನು ಗೌರವ ಪೂರ್ವಕವಾಗಿ ನಡೆಸಿಕೊಂಡಿಲ್ಲ, ಪುರುಷರಿಗೆ ಸರಿಸಮಾನವಾಗಿ ಮಹಿಳೆಯರಿಗೆ ಆದ್ಯತೆ ಸಿಗುತ್ತಿಲ್ಲವೆಂದು ವಿಷಾದವನ್ನು ವ್ಯಕ್ತಪಡಿಸಿದರು.

ಪ್ರಾಚೀನ ಕಾಲದ ಸಾಧಕ ಮಹಿಳೆಯರನ್ನು ಹೆಸರಿಸಿ ವಿವರಿಸಿದರು. ಮಹಿಳೆಯರು ಕೂಡ ಆಧುನಿಕವಾಗಿ ಬಂದಂತಹ ವಸ್ತ್ರಗಳನ್ನು ತೊಡುವುದು ಬಟ್ಟೆಗಳನ್ನು ರಂಗು ರಂಗಾಗಿ ತೊಡುವುದು ಇದನ್ನೆ ಸ್ವಾತಂತ್ರ್ಯವೆಂಬುದಾಗಿ ತಿಳಿದುಕೊಂಡಿದ್ದಾರೆ. ಇಂತಹ ಆಲೋಚನೆಗಳೆಲ್ಲವನ್ನು ಮನಸ್ಸಿನಿಂದ ತೆಗೆದು ಹಾಕಬೇಕು ಎಂದು ಹೇಳಿದರು. ಮಹಿಳೆಯರಿಗೆ ಗೌರವವೆಂದರೆ ಪುರುಷನಿಗೆ ಸರಿಸಮಾನವಾಗಿ ಪದವಿ, ಕೆಲಸ ಇತ್ಯಾದಿ ಕಾರ್ಯಗಳಲ್ಲಿ ಸರಿಸಮಾನವಾಗಿ ಸ್ಥಾನವನ್ನು ಪಡೆದರೆ ಅದು ಮಹಿಳೆಯರಿಗೆ ಸಿಗುವ ಗೌರವವೆಂದು ಹೇಳಿದರು. ಹಾಗೆಯೇ ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವಾದ ಮಹಿಳೆಯರ ಬಗ್ಗೆ ವಿವರಿಸಿದರು.



ಜಾನಪದ ಸಾಹಿತ್ಯದಲ್ಲಿ ಅನೇಕ ವಿಚಾರಗಳು ಮಹಿಳೆಯರ ವಿಚಾರವನ್ನೊಳಗೊಂಡಂತಹ ಸಾಹಿತ್ಯವು ಉಪಲಭ್ಯವಾಗುತ್ತದೆ. ಅಲ್ಲಿ ಮಹಿಳೆಯರು ಸಮಾಜದಲ್ಲಿ ಅನುಭವಿಸುವಂಥಹ ಕಷ್ಟ ಸುಖಗಳನ್ನು ತಿಳಿಸಲಾಗಿದೆ. ಯಾವ ರೀತಿ ಮಹಿಳೆಯರು ಪುರುಷಪ್ರಧಾನವಾದ ಸಮಾಜದಲ್ಲಿ ಪುರುಷರಿಂದ ತಾರತಮ್ಯಕ್ಕೊಳಗಾಗುತಿದ್ದರು ಎಂಬುವುದರ ಬಗೆಗೆ, ಪೂಜಾದಿ ಕಾರ್ಯಗಳಲ್ಲಿ ಮಡಿವಂತಿಕೆಯಿಂದ ಮಹಿಳೆಯರನ್ನು ನಿರ್ಲಕ್ಷಿಸಲಾಗುತ್ತಿತ್ತು, ಹೊರಪ್ರಪಂಚವನ್ನು ತೋರಿಸದೆ ಸಂಸಾರವೆಂಬ ಗಂಡ, ಮಕ್ಕಳು, ಮಾವ ಸೊಸೆಯರ ಸೇವೆಯಲ್ಲಿ ಮನೆಯಲ್ಲಿ ಕೂಡಿಹಾಕಲಾಗುತ್ತಿತ್ತು. ಯಾವುದೇ ಶಿಕ್ಷಣವನ್ನು ನೀಡದೆ ಪುರುಷರ ಸೇವೆಯಲ್ಲಿಯೇ ಜೀವನ ನಿರ್ವಹಣೆ ಮಾಡುವ ವಾತಾವರಣವನ್ನು ಸೃಷ್ಟಿಮಾಡಲಾಗುತ್ತಿತ್ತು. ಮನೆಯಲ್ಲಿರುವ ಸದಸ್ಯರ ಭೋಜನದ ನಂತರ ಉಳಿದ ಆಹಾರವನ್ನು ಸೇವಿಸುವಂತಹ ಪರಿಸ್ಥಿತಿಯು ಒಂದು ವ್ಯವಸ್ಥೆಯು ಇತ್ತು. ಇದೆಲ್ಲವೂ ಕೂಡ ಕೊಂಚ ಕಡಿಮೆಯಾಗಿ ಸಮಾನತೆಯ ಸ್ಥಿತಿಗೆ ಬಂದುತಲುಪಿದೆ.

ವಿದೇಶದಲ್ಲಿಯೂ ಕೂಡ ಅನೇಕ ಮಹಿಳೆಯರು ಸಮಾನತೆಗೋಸ್ಕರ ಹೋರಟ ಮಾಡಿದ್ದುಂಟು. ಫ್ರಾನ್ಸ್ ದೇಶದಲ್ಲಿಯೂ ಮಹಿಳೆಯರ ಸಮಾನತೆಗೆ ಅಲ್ಲಿಯ ಮಹಿಳೆಯೊಬ್ಬರು ಹೋರಾಟ ಮಾಡಿದ್ದುಂಟು. ಮಲಾಲಾ ಯೂಸುಫ್ ರವರು ಪಾಕಿಸ್ಥಾನದ ಮಹಿಳೆಯೊಬ್ಬರು ಹೆಣ್ಣುಮಕ್ಕಳ ಶಿಕ್ಷಣಕ್ಕೋಸ್ಕರ ಹೋರಾಟಮಾಡಿದಂಥಹವರು. ತನ್ನ ಹದಿನೈದನೆಯ ವಯಸ್ಸಿನಲ್ಲಿಯೇ ಶಿಕ್ಷಣದಲ್ಲಿ ಹೆಣ್ಣುಮಕ್ಕಳಿಗೆ ಅನ್ಯಾಯ ಮತ್ತು ತರತಮ್ಯದ ವಿರುದ್ಧ ಹೋರಾಟ ಆರಂಭಿಸಿದರು. ಹೆಣ್ಣುಮಕ್ಕಳ ಶಿಕ್ಷಣದ ಹೋರಾಟದ ಕಾರ್ಯವನ್ನು ಗಮನಿಸಿ ನೋಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ. ಹೀಗೆ ಅನೇಕ ಮಹಿಳಾ ಸಾಧಕಿಯರನ್ನು ತಮ್ಮ ಉಪನ್ಯಾಸದ ವೇಳೆ ಸ್ಮರಿಸಿದರು.



ಅಧ್ಯಕ್ಷತೆಯನ್ನು ವಹಿಸಿದ್ದಂತಹ ಕುಲಪತಿಗಳಾದ ಪ್ರೊ. ಗಿರೀಶ್ಚಂದ್ರರವರು ಮಾತನಾಡುತ್ತಾ ಆಧುನಿಕ ಕಾಲದ ಸದ್ಯದ ಸ್ಥಿತಿಯಲ್ಲಿ ಸಾಧಕರಾಗಿ ಪ್ರಸಿದ್ಧಿಯನ್ನು ಪಡೆದಂತಹ ಮಹಿಳೆಯರನ್ನು ಹೆಸರಿಸಿದರು. ಕ್ರೀಡಾ ಕ್ಷೇತ್ರದಲ್ಲಿ ಸೈನಾ ನೆಹ್ವಾಲ್, ಸಾನಿಯಾ ಮಿರ್ಜಾ ಹಾಗೂ ಸಿಂಧು. ಪಿ. ವಿ, ಇನ್ನಿತರ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರನ್ನು ಉಲ್ಲೇಖಿಸಿದರು. ವಾಣಿಜ್ಯ ಕೇತ್ರದಲ್ಲಿ ಕಿರಣ್ ಮಜುಂದರ್ ಷಾ, ಸುಧಾಮೂರ್ತಿ, ಪ್ರಮೀಳ ಮಲ್ಹೋತ್ರ ಮುಂತಾದ ಉದ್ಯಮಿಗಳು ಮಾಡಿರುವ ಸಾಧನೆಯನ್ನು ಶ್ಲಾಘಿಸಿದರು. ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧರಾದಂತಹ ಅನೇಕ ಕವಯಿತ್ರಿಯರನ್ನು ಉಲ್ಲೇಖಿಸಿದರು. ಇಂದು ಮಹಿಳೆಯರೆಲ್ಲರೂ ಕೂಡ ಶುಭ್ರವಾದ ಸೀರೆಗಳನ್ನು ಧರಿಸಿಕೊಂಡು ಮಹಿಳಾ ದಿನಾಚರಣೆಯ ಪ್ರಯುಕ್ತ ಕಂಗೊಳಿಸುತ್ತಿದ್ದೀರ ಎಂದು ಮಹಿಳೆಯರನ್ನು ಶ್ಲಾಘಿಸಿದರು. ಮಹಿಳಾ ದಿನಾಚರಣೆಯು ಕೇವಲ ಒಂದು ದಿವಸದ ಮಾತ್ರಕ್ಕೆ ಸೀಮಿತವಾಗಬಾರದು. ಮಹಿಳೆಯರು ಸದಾ ನಗುನಗುತ್ತಾ ಸಂತೋಷದಿಂದ ಪ್ರತಿದಿನವೂ ಮಹಿಳೆಯರ ಸಂತೋಷ ದಿನವಾಗಬೇಕು. ಮಹಿಳೆಯರ ಉನ್ನತಿಗೋಸ್ಕರ ಸರ್ಕಾರವೂ ಅನೇಕ ಯೋಜನೆಗಳನ್ನು ರೂಪಿಸಿದೆ. ಅನೇಕ ಮಹಿಳೆಯರು ಯು.ಪಿ.ಎಸ್.ಸಿಯಲ್ಲಿ ತೇರ್ಗಡೆಯಾಗಿ ಭಾರತದ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದಾರೆ. ಈ ರೀತಿಯಾಗಿ ಅನೇಕ ಮಹಿಳೆಯರು ಆರ್ಮಿ ಕ್ಷೇತ್ರದಲ್ಲೂ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಮಹಿಳೆಯರು ಸಶಕ್ತರಾಗಿ ಭಾರತವನ್ನು ಬೆಳಗುತ್ತಿದ್ದಾರೆ. ವಿಶ್ವದಲ್ಲಿ ಎಲ್ಲ ಕಡೆಯೂ ಮಹಿಳೆಯರು ಅವರದ್ದೇ ಆದ ಆಲೋಚನೆಯನ್ನೊಳಗೊಂಡು ನಾಸಾ ಮುಂತಾದ ಬಾಹ್ಯಾಕಾಶ ಸಂಸ್ಥೆಯಲ್ಲಿಯೂ ಸಂಶೋಧಕರಾಗಿ ಕಾರ್ಯವನ್ನು ಸಲ್ಲಿಸುತ್ತಿದ್ದು, ಸವಿತಾ ವಿಲಿಯಮ್ಸ್ ಹಗೂ ಕಲ್ಪನಾ ಚಾವ್ಲಾ ಮುಂತಾದವರು ಪ್ರಸಿದ್ಧರಾಗಿದ್ದಾರೆ. ದಿಟ್ಟ ಮಹಿಳೆಯರಾಗಿ ಬಾಹ್ಯಕಾಶವನ್ನು ಪ್ರವೇಶಿಸಿ ಬಂದಿದ್ದಾರೆ. ಹಾಗಾಗಿ ಮಹಿಳೆಯರು ಯಾವುದೇ ಪುರುಷರಿಗಿಂತಲೂ ಸಾಮರ್ಥ್ಯದಲ್ಲಿ ಕಡಿಮೆ ಇಲ್ಲವೆಂಬುದನ್ನು ಸಾಧಿಸಿ ತೋರಿಸಿದ್ದಾರೆ. ಮಹಿಳೆಯರು ಭಗವತಿ ಪಾರ್ವತಿ ಮಾತೆಯ ಅವತಾರವಾಗಿದ್ದು ಪುರುಷರ ಜೀವನವನ್ನು ಉದ್ಧರಿಸುವಂತಹವರಾಗಿದ್ದಾರೆ ಎಂದು ನುಡಿದರು.



ಹಣಕಾಸು ಅಧಿಕಾರಿಗಳಾದ ಡಾ. ಜಯಲಕ್ಷ್ಮಿರವರು ಮಾತನಾಡುತ್ತಾ ಮನೆಯಲ್ಲಿ ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವಿದ್ದರೆ ಗಂಡು ಮಗುವನ್ನು ಹೊರಗಡೆ ಕೆಲಸ ಇತ್ಯಾದಿಗಳಿಗೆ ಕಳುಹಿಸಿದರೆ. ಹೆಣ್ಣುಮಗುವನ್ನು ಮನೆಯಲ್ಲಿ ಕೇವಲ ಅಡುಗೆ

ಮನೆಗೆ ಕಳುಹಿಸುತ್ತಾರೆ ಇಲ್ಲಿಯೇ ಗೊತ್ತಾಗುತ್ತದೆ ಗಂಡು ಮಕ್ಕಳಿಗೆ ಹೊರ ಜಗತ್ತು ಕಾಣಬೇಕು ಹೆಣ್ಣು ಮಕ್ಕಳಿಗೆ ಅಡುಗೆ ಮನೆ ಕಾರ್ಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದಾಗಿ. ಹಾಗಾಗಿ ಗಂಡು ಮಕ್ಕಳನ್ನು ಹೊರಜಗತ್ತಿಗೆ ಹೇಗೆ ಕೆಲಸಗಳಿಗೆ ನಿರ್ವಹಿಸಲು ಅವಕಾಶವಿದೆಯೋ ಹಾಗೆಯೇ ಹೆಣ್ಣು ಮಕ್ಕಳಿಗೂ ಅವಕಾಶ ನೀಡಬೇಕು ಸಮಾನವಾಗಿ ಹೆಣ್ಣು ಗಂಡುಗಳಿಗೆ ಅವಕಾಶ ಕಲ್ಪಿಸಬೇಕು ಆಗಲೇ ಹೆಣ್ಣಿಗೆ ಗೌರವ ಕಲ್ಪಿಸಿದಂತಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವಿದುಷೀ ಸಾವಿತ್ರಿ ಪೂಜಾರಿಯವರು, ಸಂಶೋಧನಾ ಸಹಾಯಕರು, ಕಸಂವಿ ಇವರು ನಿರೂಪಣೆಯನ್ನು ಮಾಡಿದರು, ವಿದುಷೀ ಜ್ಯೋತಿರವರು ಸ್ವಾಗತವನ್ನು ಮಾಡಿದರು. ಡಾ. ಅನುಪಮಾರವರು ವಂದನಾರ್ಪಣೆಯನ್ನು ಮಾಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ವಿದ್ಯಾರ್ಥಿಗಳು ಎಂ.ಎ. ವಿದ್ಯಾರ್ಥಿಗಳು, ಪಿ.ಎಚ್.ಡಿ ವಿದ್ಯಾರ್ಥಿಗಳು, ಯೋಗ ಎಂ.ಎಸ್ಸಿ ವಿದ್ಯಾರ್ಥಿಗಳು ಹಾಗೂ ಡಿಪ್ಲೋಮಾ ವಿದ್ಯಾರ್ಥಿಗಳು ಭಾಗವಹಿಸಿದ್ದರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರುಗಳು, ಸಂಶೋಧನಾ ಸಹಾಯಕರು, ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವು ಶಾಂತಿಮಂತ್ರದೊಂದಿಗೆ ಸಮಾಪ್ತಿಯಾಯಿತು.



ಮಾನ್ಯ ಕುಲಪತಿಗಳು ಮೈಸೂರಿನ ಸರ್ಕಾರಿ ಸಂಸ್ಕೃತ ಮಹಾವಿದ್ಯಾಲಯಕ್ಕೆ ಬೇಟಿ ನೀಡಿದ ಸಂದರ್ಭ, ಮಾನ್ಯ ಕುಲಪತಿಗಳನ್ನು ಕಾಲೇಜಿನ ಸಿಬ್ಬಂದಿಗಳು ಸನ್ಮಾನ ಮಾಡಿದರು.

# ಅಖಿಲ ಭಾರತೀಯ ಶಾಸ್ತ್ರೀಯ ಸ್ಪರ್ಧೆಯಲ್ಲಿ "ವಿಜಯವೈಜಯಂತೀ" ಪ್ರಶಸ್ತಿ ಪಡೆದ ಕಸಂವಿಯ ವಿದ್ಯಾರ್ಥಿಗಳು

**ಡಾ. ರಾಮಕೃಷ್ಣ ಭಟ್**
ಪರೀಕ್ಷಾ ನಿಯಂತ್ರಕರು



ಕೇಂದ್ರ ಸರಕಾರದ ಸಹಕಾರದಿಂದ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವು ಉತ್ತರಪ್ರದೇಶದಲ್ಲಿರುವ ವಾರಣಾಸಿಯಲ್ಲಿ **'60ನೆಯ ರಾಷ್ಟ್ರಸ್ತರೀಯ ಶಾಸ್ತ್ರೀಯ ಸ್ಪರ್ಧೆ'**ಗಳನ್ನು ಆಯೋಜಿಸಿತ್ತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ರಾಜ್ಯಸ್ತರೀಯ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.



1. ಅಲಂಕಾರ,
2. ವ್ಯಾಕರಣ,
3. ನ್ಯಾಯ,
4. ಮೀಮಾಂಸಾ,
5. ಜ್ಯೋತಿಷ್ಯ,
6. ಧರ್ಮ,
7. ವೇದಾಂತ,
8. ವೇದಭಾಷಣ,
9. ಜೈನ-ಬೌದ್ಧ
10. ಭಾಷಣ,
11. ಸಾಂಖ್ಯಯೋಗಭಾಷಣ,
12. ಭಾರತೀಯ ವಿಜ್ಞಾನ ಭಾಷಣ
13. ವ್ಯಾಕರಣಶಲಾಕಾ
14. ಸಾಹಿತ್ಯ ಶಲಾಕಾ
15. ಕಾವ್ಯಶಲಾಕಾ
16. ಧಾತುಕಂಠಪಾಠಃ
17. ಜ್ಯೋತಿಷಶಲಾಕಾ
18. ಭಾರತೀಯಗಣಿತಶಲಾಕಾ
19. ಅಕ್ಷರಶ್ಲೋಕೀ
20. ಶಾಸ್ತ್ರಾರ್ಥವಿಚಾರಃ
21. ಪುರಾಣೇತಿಹಾಸಶಲಾಕಾ
22. ಅಮರಕೋಷಕಂಠಪಾಠಃ
23. ಕಾವ್ಯಕಂಠಪಾಠಃ
24. ಭಗವದ್ಗೀತಾಕಂಠಪಾಠಃ
25. ಅಷ್ಟಾಧ್ಯಾಯೀಕಂಠಪಾಠಃ
26. ಸುಭಾಷಿತಕಂಠಪಾಠಃ
27. ಸಮಸ್ಯಾಪೂರ್ತಿಃ
28. ಆಯುರ್ವೇದ ಭಾಷಣಮ್
29. ಮೀಮಾಂಸಾಶಲಾಕಾ
30. ಅರ್ಥಶಾಸ್ತ್ರಶಲಾಕಾ
31. ಶಾಸ್ತ್ರೀಯಸ್ಫೂರ್ತಿಸ್ಪರ್ಧಾ

ಹೀಗೆ 33 ಕ್ಕೂ ಹೆಚ್ಚು ಸ್ಪರ್ಧೆಗಳನ್ನು ರಾಷ್ಟ್ರಸ್ತರದಲ್ಲಿ ಆಯೋಜಿಸಲಾಗಿತ್ತು. ಈ 33 ಸ್ಪರ್ಧೆಗಳಲ್ಲಿ ರಾಜ್ಯಸ್ತರೀಯ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಕರ್ನಾಟಕದಿಂದ ಭಾಗವಹಿಸಿದ್ದರು.

1. ಸುವರ್ಣ ಪದಕ-14
2. ರಜತ ಪದಕ-08
3. ಕಂಚಿನ ಪದಕ-05

ಒಟ್ಟು-27ಸ್ಥಾನಗಳನ್ನು ಪಡೆದು **'ವಿಜಯವೈಜಯಂತೀ'** ಪ್ರಶಸ್ತಿಯನ್ನು ಕರ್ನಾಟಕದ ವಿದ್ಯಾರ್ಥಿಗಳು ತನ್ನದಾಗಿಸಿಕೊಂಡಿದ್ದಾರೆ.




**'ವಿಜಯವೈಜಯಂತೀ'** ಪ್ರಶಸ್ತಿಯನ್ನು ಪಡೆದ ವಿದ್ಯಾರ್ಥಿಗಳು ಮಾನ್ಯ ಕುಲಪತಿಗಳನ್ನು ಭೇಟಿ ಮಾಡಿ ಆಶೀರ್ವಾದವನ್ನು ಪಡೆದರು. ಮಾನ್ಯ ಕುಲಪತಿಗಳು ಅತ್ಯಂತ ಸಂತೋಷದಿಂದ ಸ್ಪರ್ಧೆಗಳಲ್ಲಿ ವಿಜೇತರಾಗಿ ವಿಜಯವೈಜಯಂತೀ ಪ್ರಶಸ್ತಿಯನ್ನು ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

## ಕಸಂವಿಯ ನೂತನ ಕುಲಸಚಿವರಾಗಿ ಶ್ರೀಮಾನ್ ನರಸಿಂಹಪ್ಪರವರು ಪದಗ್ರಹಣ ಮಾಡಿದರು



ದಿನಾಂಕ: 24.03.2023ರಂದು ಶ್ರೀಮಾನ್ ನರಸಿಂಹಪ್ಪರವರು ಕಸಂವಿಯ ನೂತನ ಕುಲಸಚಿವರಾಗಿ ಪದಗ್ರಹಣ ಮಾಡಿದರು. ದಿನಾಂಕ:30.03.2023ರಂದು ಶ್ರೀರಾಮನವಮಿಯಂದು ಪೂಜಾಕಾರ್ಯಕ್ರಮಗಳನ್ನು ಕಸಂವಿಯಿಂದ ಆಯೋಜಿಸಲಾಗಿತ್ತು. ಈಸಂದರ್ಭದಲ್ಲಿ ನೂತನವಾಗಿ ಪದಗ್ರಹಣ ಮಾಡಿದ ಮಾನ್ಯ ನರಸಿಂಹಪ್ಪರವರನ್ನು ಮಾನ್ಯ ಕುಲಪತಿಗಳಾದ ಡಾ. ಅಹಲ್ಯರವರು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪ್ರೊ. ಗಿರೀಶಚಂದ್ರರವರು ಹಾಗೂ ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಾಲಯ್ಯರವರು, ಪರೀಕ್ಷಾ ನಿಯಂತ್ರಕರು ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಕಾರಿಗಳು, ಪ್ರಾಧ್ಯಾಪಕರು, ಸಂಶೋಧನಾ ಸಹಾಯಕರು, ಬೋಧಕೇತರ ಸಿಬ್ಬಂದಿಗಳು ಹೊರಗುತ್ತಿಗೆ ನೌಕರರು ಹಾಗೂ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮೈತ್ರೇಯೀ ಗುರುಕುಲಕ್ಕೆ ಭೇಟಿ



ಮಾನ್ಯ ಕುಲಪತಿಗಳಾದ ಡಾ. ಅಹಲ್ಯಾರವರು ಮೈತ್ರೇಯೀ ಗುರುಕುಲಕ್ಕೆ ಭೇಟಿ ನೀಡಿದ್ದರು.

## "ಶಾಸ್ತ್ರಸೇವಾದುರಂಧರ" ಪ್ರಶಸ್ತಿ ನೀಡಿ ಪ್ರೊ. ಶ್ರೀನಿವಾಸ ವರಖೇಡಿಯವರನ್ನು ಗೌರವಿಸಲಾಯಿತು.



ಭಾರತದ ಕೇಂದ್ರ ಸರ್ಕಾರದ ಅಧೀನದಲ್ಲಿರುವ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳಾದ ಪ್ರೊ. ಶ್ರೀನಿವಾಸ ವರಖೇಡಿರವರು ಕಸಂವಿಯ ನೂತನ ಕುಲಪತಿಗಳಾದ ಪ್ರೊ. ಅಹಲ್ಯಾರವರನ್ನು ಭೇಟಿ ಮಾಡಿ ಅಭಿನಂದಿಸಿದರು ಹಾಗೂ ತಾವು ರಚಿಸಿದಂತಹ **'ಶಾಸ್ತ್ರಪದ್ಧತಿ'** ಎಂಬುವ ಗ್ರಂಥವನ್ನು ಅರ್ಪಿಸಿ ಅಭಿನಂದನೆಯನ್ನು ತಿಳಿಸಿದರು.

**ಈ ಸಂದರ್ಭದಲ್ಲಿ "ಶಾಸ್ತ್ರಸೇವಾದುರಂಧರ" ಪ್ರಶಸ್ತಿ ನೀಡಿ ಪ್ರೊ. ಶ್ರೀನಿವಾಸ ವರಖೇಡಿಯವರನ್ನು ಗೌರವಿಸಲಾಯಿತು.**



ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 2022ನೇ ಸಾಲಿನ ಸ್ನಾತಕಪೂರ್ವದೀಕ್ಷಾಂತ ಘಟಿಕೋತ್ಸವದ ಸಂದರ್ಭದಲ್ಲಿ ಅಂದಿನ ಕುಲಪತಿಗಳಾದ ಪ್ರೊ. ಕೆ. ಈ. ದೇವನಾಥನ್‌ರವರು ಘೋಷಿಸಿದ **"ಶಾಸ್ತ್ರಸೇವಾದುರಂಧರ"** ಎಂಬುವ ಪ್ರಶಸ್ತಿಯನ್ನು ಕಸಂವಿಯ ಮಾನ್ಯ ಕುಲಪತಿಗಳಾದ ಡಾ. ಅಹಲ್ಯಾಶರ್ಮಾರವರು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಶ್ರೀನಿವಾಸ ವರಖೇಡಿಯವರನ್ನು ನೀಡಿ ಪ್ರಶಸ್ತಿಯನ್ನು ನೀಡಿ ಅಭಿನಂದಿಸಿದರು.

ಪ್ರೊ. ಶ್ರೀನಿವಾಸ ವರಖೇಡಿಯವರು ಕಾರಣಾಂತರಗಳಿಂದ ಪ್ರಶಸ್ತಿ ನೀಡುವ ಕಾರ್ಯಕ್ರಮದಲ್ಲಿ ಬರಲು ಸಾಧ್ಯವಾಗಿರಲಿಲ್ಲ ಆದ್ದರಿಂದ ಈ ಸಂದರ್ಭದಲ್ಲಿ **"ಶಾಸ್ತ್ರಸೇವಾದುರಂಧರ"** ಎಂಬುವ ಪ್ರಶಸ್ತಿಯನ್ನು ಸ್ವೀಕರಿಸಿದರು.

# 136ನೇ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ

**ಡಾ. ಗೋವಿಂದ ಬಿ.**
ಉಪ ನಿರ್ದೇಶಕರು



ದಿನಾಂಕ:14.04.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಡಾ. ಬಿ. ಆರ್ ಅಂಬೇಡ್ಕರ್‌ರವರ 136ನೇ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬಾಬಾ ಸಾಹೇಬ ಡಾ. ಬಿ. ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಕುಲಪತಿಗಳಾದ ಡಾ॥ ಅಹಲ್ಯಾರವರು ಪುಷ್ಪವನ್ನು ಸಮರ್ಪಿಸಿದರು. ಕುಲಸಚಿವರಾದ ನರಸಿಂಹಪ್ಪ ಹಾಗೂ **ಡಾ. ಬಿ.ಆರ್ ಅಂಬೇಡ್ಕರ್ ಸಂಶೋಧನೆ ಹಾಗೂ ಅಧ್ಯಯನ ಕೇಂದ್ರದ** ಸಂಯೋಜಕರಾದ ಡಾ. ಗೋವಿಂದ ಬಿ.ರವರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಾಲಯ್ಯರವರು ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪಗುಚ್ಛವನ್ನು ಸಮರ್ಪಿಸಿ ನಮಸ್ಕರಿಸಿದರು.

ವಿಶೇಷೋಪನ್ಯಾಸಕರಾಗಿ ಕನ್ನಡಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಡಾ. ಸಂತೋಷ ಹಾನಗಲ್‌ರವರು ಆಗಮಿಸಿದ್ದರು. ಅವರು ಮಾತನಾಡುತ್ತಾ ಡಾ. ಬಿ.ಆರ್. ಅಂಬೇಡ್ಕರ್‌ರವರು ಬಾಲ್ಯದಿಂದಲೂ ಕಷ್ಟಗಳನ್ನು ಅನುಭವಿಸಿ ಅವುಗಳನ್ನು ದಾಟಿ ಸಾಧಿಸಿ ತೋರಿಸಿದಂತಹ ಮಹಾನ್ ವ್ಯಕ್ತಿಯವರು. ಬಾಲ್ಯದಲ್ಲಿ ಅಂಬೇಡ್ಕರ್‌ರವರ ಅಧ್ಯಯನ ಚತುರತೆಯನ್ನು ಗಮನಿಸಿದ ತಂದೆಯಾದ ರಾಮ್‌ಜಿಯವರು ಉತ್ತಮವಾದ ಶಾಲೆಗೆ ಸೇರಿಸುತ್ತಾರೆ. ಅಲ್ಲಿ ಇತರ ವಿದ್ಯಾರ್ಥಿಗಳಿಗಿಂತಲೂ ಅಧ್ಯಯನದಲ್ಲಿ ಹೆಚ್ಚು ಬದ್ಧವಂತರಾಗಿರುತ್ತಾರೆ ಡಾ. ಬಿ.ಆರ್. ಅಂಬೇಡ್ಕರ್‌ರವರು. ಪ್ರೌಢಶಿಕ್ಷಣವನ್ನು ಮುಗಿಸಿದ ನಂತರ ಅವರು ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಲು ಬಯಸುತ್ತಾರೆ ಆದರೆ ಮನೆಯಲ್ಲಿ ಕಡು ಬಡತನ ತಿನ್ನಲು ಒಂದು ಹೊತ್ತು ಊಟಕ್ಕೂ ಪೇಚಾಡುವ ಪರಿಸ್ಥಿತಿ ಇಂತಹ ಸಂದರ್ಭದಲ್ಲಿ ಹೇಗೆ ವಿದೇಶಕ್ಕೆ ಹೋಗಲು ಸಾಧ್ಯ.

ಆದಾಗ್ಯೂ ಆ ಪ್ರದೇಶದ ಮುಖಂಡರಾದ ಒಬ್ಬ ಗಣ್ಯರನ್ನು ಹಿಡಿದು ಬರೋಡ ಮಹಾರಾಜರು ಅದಾಗಿಯು ಅಂದಿನ ಕಾಲದಲ್ಲಿ ವಿದೇಶಕ್ಕೆ ಹೋಗಿ ಅಧ್ಯಯನ ಮಾಡ ಬಯಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುತ್ತಿದ್ದರು ಒಪ್ಪಂದದ ಮೇರೆಗೆ. ಈ ವಿಚಾರವಾಗಿ ತಾನು ಅಧ್ಯಯನ ಮಾಡಲು ಆ ಗಣ್ಯವ್ಯಕ್ತಿಗಳ ಮುಖಾಂತರ ವಿದ್ಯಾರ್ಥಿವೇತನವನ್ನು ಪಡೆದು ವಿದೇಶಕ್ಕೆ ಅಧ್ಯಯನ ಮಾಡಲು ಹೊರಟರು. ಅಲ್ಲಿ ಅಧ್ಯಯನ ಮಾಡಿ ಪಿಎಚ್.ಡಿಯನ್ನು ಕೂಡ ಪ್ರಸಿದ್ಧ ಅಧ್ಯಾಪಕರ ಮಾರ್ಗದರ್ಶನದಲ್ಲಿ ಪಿಎಚ್.ಡಿಯನ್ನು ಮುಗಿಸುತ್ತಾರೆ. ಅನಂತರ ಸ್ವದೇಶಕ್ಕೆ ಬಂದು ತನ್ನ ಜನರ ಸೇವೆ ಮಾಡಬೇಕು ಆಗಿನ ಕಾಲದಲ್ಲಿ ಅನುಭವಿಸುತ್ತಿದ್ದ ತಾರತಮ್ಯವನ್ನು ನೆನೆದು ಭಾರತಕ್ಕೆ ಮರಳಿ ಇಲ್ಲಿ ತನ್ನದೇ ಆದ ಒಂದು ಪತ್ರಿಕೆಯನ್ನು ಹೊರತರುತ್ತಾರೆ. ಆದರೆ ಆಗಿನ ಕಾಲದ ತಾರತಮ್ಯದಿಂದಾಗಿ ಅದು ಅಷ್ಟು ಯಶಸ್ಸನ್ನು ಕಾಣುವುದಿಲ್ಲ. ಆ ಸಂದರ್ಭದಲ್ಲಿ "ಬ್ರಿಟೀಶರೇ ಭಾರತವನ್ನು ಬಿಟ್ಟು ತೊಲಗಿ" ಎಂಬುವ ಆಂದೋಲನ ಆರಂಭವಾಗಿತ್ತು. ಮಹಾತ್ಮಾ ಗಾಂಧೀಜಿಯವರ ಪ್ರೇರಣೆಯಿಂದ ಆ ಆಂದೋಲನದಲ್ಲಿಯೂ ಭಾಗಿಯಾಗುತ್ತಾರೆ. ಇತ್ತ ಕಡೆ ದಲಿತರನ್ನು ಅಸ್ಪೃಶ್ಯರನ್ನಾಗಿ ಕಾಣುವ ವಿರುದ್ದವು ಕೂಡ ಹೋರಾಡುವ ಅಂಬೇಡ್ಕರ್‌ರವರ ಪ್ರಮುಖ ಉದ್ದೇಶವಾಗಿತ್ತು. ಹೀಗೆ ಅಂಬೇಡ್ಕರ್‌ರವರು ದೀನ, ದಲಿತರ ಏಳ್ಗೆಗಾಗಿ ಶ್ರಮಿಸುತ್ತಾರೆ. ಬ್ರಿಟೀಶರು ಭಾರತವನ್ನು ಬಿಟ್ಟು ತೊಲಗಿದ ನಂತರ ಭಾರತದ ಹೊಸ ಸರ್ಕಾರವೂ ರಚನೆಯಾಗುತ್ತದೆ ಆ ಸರ್ಕಾರದಲ್ಲಿ ಕಾನೂನು ಮಂತ್ರಿಯೂ ಆಗುತ್ತಾರೆ. ಆ ಸಂದರ್ಭದಲ್ಲಿ ದೇಶದ ಅತ್ಯುನ್ನತ ಗೌರವವಾದ ಸಂವಿಧಾನವನ್ನು ರಚಿಸುವ ಹೊಣೆಯನ್ನು ಡಾ. ಬಿ.ಆರ್.ಅಂಬೇಡ್ಕರವರು ಹೊರುತ್ತಾರೆ. ವಿಶ್ವವೇ ತಿರುಗಿ ನೋಡುವಂತಹ ಸಂವಿಧಾನವನ್ನು ರಚಿಸುತ್ತಾರೆ. ಇದು ದೇಶದ ಆತ್ಮ ಗೌರವವಾದ ಕಾರ್ಯವಾಗಿದೆ. ದೀನ, ದಲಿತರ ಪಾಲಿಗೆ ಹೊಸವರ್ಷವೇ ಆರಂಭವಾದಂತೆ ಆಯಿತು. ದೇಶದ ಎಲ್ಲ ಶ್ರಮಿಕ ವರ್ಗದವರಿಗೆ ಸಿಗಬೇಕಾದ ನ್ಯಾಯವನ್ನು ಒದಗಿಸಿಕೊಡುತ್ತಾರೆ. ಎಲ್ಲಾ ವರ್ಗದ ಜನರು ಸಮಾನವಾಗಿ ಪರಸ್ಪರ ಗೌರವವನ್ನು ಹೊದುವಂತಹವರಾಗಬೇಕು ಎಂಬುವ ಸಂವಿಧಾನವನ್ನು ರಚಿಸುತ್ತಾರೆ.



ಕುಲಪತಿಗಳಾದ ಡಾ॥ ಅಹಲ್ಯಾರವರು ಮಾತನಾಡುತ್ತಾ ಡಾ. ಬಿ. ಆರ್. ಅಂಬೇಡ್ಕರ್‌ರವರು ವಿಶ್ವದ ಎಲ್ಲ ವರ್ಗದವರು ಮೆಚ್ಚುವ ಕಾರ್ಯವನ್ನು ಮಾಡಿದ್ದಾರೆ ಅಂತಹ ಮಹನೀಯರ ಜನ್ಮದಿನ ಇಂದು ಎಂದರು. ಅಂಬೇಡ್ಕರ್‌ರವರು ಸಂಸ್ಕೃತ ಭಾಷೆಯು ರಾಷ್ಟ್ರಭಾಷೆಯಾಗಬೇಕೆಂಬುದು ಮಹಾ ಬಯಕೆಯಾಗಿತ್ತು. ಅವರು ಅಂದೇ ಸಂಸ್ಕೃತವನ್ನು ರಾಷ್ಟ್ರಭಾಷೆ ಮಾಡಿದರೆ ಪ್ರಾದೇಶಿಕ ಭಾಷಾ ಸಮಸ್ಯೆ ಇರುವುದಿಲ್ಲ ಎಂಬುವ ಮಾತನ್ನು ಹೇಳಿದ್ದರು. ಡಾ. ಅಂಬೇಡ್ಕರ್‌ರವರು ದೇಶಕ್ಕೆ ನೀಡಿದಂತಹ ಸಂವಿಧಾನವು ಅತ್ಯಂತ ವಿಶಿಷ್ಟವಾಗಿ ಕೂಡಿದ್ದಾಗಿದೆ. ದೇಶದ ಎಲ್ಲಾ ಜನಾಂಗದ ಸಂಸ್ಕೃತಿಯನ್ನು ಗೌರವಿಸುವ, ಎಲ್ಲಾ ಧರ್ಮಗಳ ಹಿತವನ್ನು ಕಾಪಾಡುವ, ಎಲ್ಲಾ ಜನರ ಅಭಿವೃದ್ಧಿಯನ್ನು ಬಯಸುವ ಅಂಶವೂ ಸಂವಿಧಾನವಾಗಿದೆ. ಹಾಗಾಗಿ ಸಂವಿಧಾನವನ್ನು ರಚಿಸಿದ ಡಾ. ಅಂಬೇಡ್ಕರ್‌ರವರನ್ನು ಸ್ಮರಿಸಬೇಕು. ಅವರು ಹಾಕಿ ಕೊಟ್ಟಂತಹ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು ಎಂದರು. ಇಂದು ಸೌರಮಾನ ಯುಗಾದಿ ಆರಂಭವಾಗಿದೆ ಹಾಗಾಗಿ ಎಲ್ಲರಿಗೂ ಕೂಡ ಈ ವರ್ಷ ಆನಂದ ಸುಖ, ಸಂತೋಷವನ್ನು ನೀಡಲಿ ಮತ್ತು ಆ ಭಗವಂತ ಆಯುರಾರೋಗ್ಯ, ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲಿ ಎಂದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ **ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನೆ ಹಾಗೂ ಅಧ್ಯಯನ ಕೇಂದ್ರದ** ಡಿಪ್ಲೋಮಾ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಡಾ॥ ರಾಮಕೃಷ್ಣ ರಾವ್‌ರವರು ಮಾನ್ಯ ಕುಲಪತಿಗಳನ್ನು ಭೇಟಿ ಮಾಡಿ ಅಭಿನಂದಿಸಿದರು.




ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಚಾರ್ಯರಾದ ಡಾ॥ ರಾಮಕೃಷ್ಣ ರಾವ್‌ರವರು ಮಾನ್ಯ ಕುಲಪತಿಗಳನ್ನು ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿನ ವಿವಿಧ ವಿಭಾಗದ ಅಧಿಕಾರಿಗಳು ಹಾಜರಿದ್ದರು.

## ಕನ್ನಡ ಗಣಕ ಸಾಹಿತ್ಯ ಪರಿಷತ್ ವತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಗ್ರಂಥ ನೀಡಿದರು.



**ಕನ್ನಡ ಗಣಕ ಸಾಹಿತ್ಯ ಪರಿಷತ್** ವತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ **"ಕುಮಾರವ್ಯಾಸ ಭಾರತ ಎಂಬ ಕರ್ಣಾಟ ಭಾರತ ಕಥಾಮಂಜರೀ"** ಗ್ರಂಥದ ಮೊದಲನೆಯ ಹಾಗೂ ಎರಡನೆಯ ಸಂಪುಟವನ್ನು ಮಾನ್ಯ ಕುಲಪತಿಗಳಿಗೆ ನೀಡಿ ಗ್ರಂಥಾಲಯದಲ್ಲಿ ಸಂರಕ್ಷಿಸಿ ವಿದ್ಯಾರ್ಥಿಗಳಿಗೆ ಅಥವಾ ಓದುಗರಿಗೆ ಅನುಕೂಲವಾಗಲೆಂದು ಹಾರೈಸಿದರು. ಈ ಸಂದರ್ಭದಲ್ಲಿ ಕನ್ನಡ ಗಣಕ ಸಾಹಿತ್ಯ ಪರಿಷತ್‌ನ ಕಾರ್ಯದರ್ಶಿಗಳು ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದು ಮಾನ್ಯ ಕುಲಪತಿಗಳ ಸಮ್ಮುಖದಲ್ಲಿ ಗ್ರಂಥವನ್ನು ನೀಡಿದರು.

## ಕಸಂವಿಯಲ್ಲಿ ಜ್ಯೋತಿಷ್ಯ ವಿಭಾಗ ಆರಂಭಿಸಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆ.



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ ಜ್ಯೋತಿಷ್ಯ ಬಿ.ಎ ಹಾಗೂ ಜ್ಯೋತಿಷ್ಯ ಎಂ.ಎ ತರಗತಿಗಳನ್ನು ಪ್ರಾರಂಭಿಸಲು ಮಾನ್ಯ ಕುಲಪತಿಗಳೊಂದಿಗೆ ಸಿಂಡಿಕೇಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಜ್ಯೋತಿಷ್ಯ ಸಂಘದ ಮನವಿಯಂತೆ ದಿನಾಂಕ:15.04.2023ರಂದು ಸಭೆಯನ್ನು ಸೇರಲಾಗಿತ್ತು. ಸಭೆಯಲ್ಲಿ ಜ್ಯೋತಿಷ್ಯ ವಿಭಾಗವನ್ನು ಆರಂಭಿಸುವ ಬಗೆಗೆ ಹಲವು ವಿಚಾರಗಳನ್ನು ಚರ್ಚಿಸಲಾಯಿತು.

## ಅಧೀನ ಕಾಲೇಜುಗಳ ಬಿ.ಎ ಹಾಗೂ ಎಂ.ಎ ತರಗತಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ



ದಿನಾಂಕ:17.04.2023ರಿಂದ ದಿನಾಂಕ:21.04.2023ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳ ಬಿ.ಎ ಹಾಗೂ ಎಂ.ಎ ತರಗತಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವು ಅತ್ಯಂತ ಅಚ್ಚುಕಟ್ಟಾಗಿ ನಿರ್ವಿಘ್ನವಾಗಿ ನಡೆಯಿತು. ಅಧೀನ ಕಾಲೇಜುಗಳ ವಿದ್ವಾಂಸರಾದ ಪ್ರಾಧ್ಯಾಪಕರು ಅತ್ಯಂತ ಶ್ರದ್ಧೆಯಿಂದ ಮೌಲ್ಯಮಾಪನ ಕಾರ್ಯವನ್ನು ಮಾಡಿದರು. ಪರೀಕ್ಷಾ ನಿಯಂತ್ರಕರಾದ ಡಾ. ರಾಮಕೃಷ್ಣ ಭಟ್ಟರವರು ಮೌಲ್ಯಮಾಪನ ಕಾರ್ಯದ ಮೇಲುಸ್ತುವಾರಿಯನ್ನು ನೋಡಿಕೊಂಡು ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಗೊಳಿಸಿದರು. ಶೀಘ್ರದಲ್ಲಿಯೇ ವಿದ್ಯಾರ್ಥಿಗಳಿಗೆ ಬಿ.ಎ ಹಾಗೂ ಎಂ.ಎ ತರಗತಿಗಳ ಫಲಿತಾಂಶವೂ ಸಿಗಲಿದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದಿನಾಂಕ:21.04.2023ರಂದು ಯೋಗ ವಿದ್ಯಾರ್ಥಿಗಳಿಗೆ ಅಧ್ಯಯನದ ಬಿಡುವಿನ ವೇಳೆಯಲ್ಲಿ ಕ್ರೀಡಾ ಕೂಟವನ್ನು ಆಯೋಜಿಸಲಾಗಿತ್ತು, ಈ ಸಂದರ್ಭದಲ್ಲಿ ಯೋಗ ವಿದ್ಯಾರ್ಥಿಗಳು ವಾಲಿಬಾಲ್, ಶಟಲ್ ಕಾಕ್, ಮುಂತಾದ ಕ್ರೀಡೆಗಳನ್ನ ಆಡಿ ಆನಂದಿಸಿದರು.

# ಯೋಗವಿದ್ಯಾರ್ಥಿಗಳಿಂದ ಕ್ರೀಡೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದಿನಾಂಕ:21.04.2023ರಂದು ಯೋಗ ವಿದ್ಯಾರ್ಥಿಗಳಿಗೆ ಅಧ್ಯಯನದ ಬಿಡುವಿನ ವೇಳೆಯಲ್ಲಿ ಕ್ರೀಡಾ ಕೂಟವನ್ನು ಆಯೋಜಿಸಲಾಗಿತ್ತು, ಈ ಸಂದರ್ಭದಲ್ಲಿ ಯೋಗ ವಿದ್ಯಾರ್ಥಿಗಳು ವಾಲಿಬಾಲ್, ಶಟಲ್ ಕಾಕ್, ಮುಂತಾದ ಕ್ರೀಡೆಗಳನ್ನ ಆಡಿ ಆನಂದಿಸಿದರು.




ಈ ಸಂದರ್ಭದಲ್ಲಿ ಯೋಗ ವಿಭಾಗದ ಸಂಯೋಜಕರಾದ ಡಾ. ಜಯರೇವಣ್ಣರವರು ಉಪಸ್ಥಿತರಿದ್ದರು.




ಯೋಗ ವಿಭಾಗದ ಎಲ್ಲಾ ಪ್ರಾಧ್ಯಾಪಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಆಟವನ್ನು ಆಡಲು ಉತ್ತೇಜಿಸಿದರು.




ಯೋಗ ವಿಭಾಗದ ಕ್ರೀಡೆಯಲ್ಲಿ ಬೌದ್ಧಿಕ ಕ್ರೀಡೆಯನ್ನು ಮಹಿಳೆಯರಿಗೆ ಆಯೋಜಿಸಲಾಗಿತ್ತು. ಮಹಿಳಾ ವಿದ್ಯಾರ್ಥಿಗಳು ಸಂತೋಷದಿಂದ ಭಾಗವಹಿಸಿ ಉತ್ಸಾಹದಿಂದ ಆಡಿದರು ಆಟವನ್ನು.

## ಮೈಸೂರು ಮಹಾರಾಜ ಸಂಸ್ಕೃತ ಮಹಾವಿದ್ಯಾಲಯಕ್ಕೆ ಮಾನ್ಯ ಕುಲಪತಿಗಳು ಭೇಟಿ ನೀಡಿದ್ದರು.



ದಿನಾಂಕ:23.04.2023ರಂದು ಮಾನ್ಯ ಕುಲಪತಿಗಳಾದ ಡಾ. ಅಹಲ್ಯಾರವರು ಮೈಸೂರಿನಲ್ಲಿರುವ ಮಹಾರಾಜ ಸಂಸ್ಕೃತ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ್ದರು. ಭೇಟಿ ನೀಡಿದ ಸಂದರ್ಭದಲ್ಲಿ ಕಾಲೇಜಿನ ಕುಂದು ಕೊರತೆಗಳನ್ನು ವಿಚಾರಿಸಿದರು ಹಾಗೂ ಪ್ರಾಧ್ಯಾಪಕರ ಯೋಗಕ್ಷೇಮವನ್ನು ವಿಚಾರಿಸಿದರು.

## ಮತದಾನದ ಜಾಗೃತಿಯ ಜಾಥಾ ಕಾರ್ಯಕ್ರಮ




ದಿನಾಂಕ:21.04.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಮತದಾನದ ಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮಾನ್ಯಕುಲಪತಿಗಳಾದ ಡಾ॥ ಅಹಲ್ಯಾರವರು ಮತದಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.




ಈ ಜಾಥಾವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಲ ಮುಖ್ಯದ್ವಾರದಿಂದ ಹೊರಟು ಪಂಪ ಮಹಾಕವಿ ರಸ್ತೆಯಲ್ಲಿ ಕ್ರಮಿಸಿ ಬೆಂಗಳೂರು ಕೋ–ಆಪರೇಟಿವ್ ಬ್ಯಾಂಕ್ ಮುಂಬಾಗದಿಂದ ಕನ್ನಡ ಸಾಹಿತ್ಯ ಪರಿಷತ್ ಮಾರ್ಗದ ಮುಂಬಾಗದವರೆಗೆ ನಡೆದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಡ ಮುಖ್ಯದ್ವಾರದಿಂದ ಒಳ ಪ್ರವೇಶಿಸಿ ಜಾಥಾವನ್ನು ಪರಿಸಮಾಪ್ತಿ ಮಾಡಿದರು. ಜಾಥಾದಲ್ಲಿ ಯೋಗ ವಿದ್ಯಾರ್ಥಿಗಳು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ ಮತದಾನದ ಬಗ್ಗೆ ಜಾಗೃತಿ ಮೂಡಿಸುತ್ತಾ ಜಾಥಾವನ್ನು ಯಶಸ್ವಿಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಯೋಗ ವಿಭಾಗದ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಯೋಗ ವಿಭಾಗದ ಸಂಯೋಜಕರಾದ ಡಾ. ಜಯರೇವಣ್ಣರವರು ಕಾರ್ಯಕ್ರಮವನ್ನು ರೂಪಿಸಿ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

## ನೂತನ ಹಣಕಾಸು ಅಧಿಕಾರಿಗಳಾಗಿ ವಿದ್ವಾನ್ ಎಸ್. ಕುಮಾರ್‌ರವರು



ದಿನಾಂಕ;25.04.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಹಣಕಾಸು ಅಧಿಕಾರಿಗಳಾಗಿ ವಿದ್ವಾನ್ ಕುಮಾರ್ ಎಸ್. ರವರು ಅಧಿಕಾರವನ್ನು ವಹಿಸಿಕೊಂಡರು.

# ಕಸಂವಿಯಲ್ಲಿ ಸರಸ್ವತಿಮೂರ್ತಿಯ ಪ್ರತಿಷ್ಠಾಪನೆ

**ವಿದ್ವಾನ್ ಹೇಮರಾಜ.ಎನ್.ಎಸ್**
ಸಂಶೋಧನಾ ಸಹಾಯಕರು



ದಿನಾಂಕ: 25.04.2023ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಜಗನ್ಮಾತೆಯಾದ, ಶಾರದೆಯೂ ಆದ, ವಿದ್ಯಾಧಿದೇವತೆಯಾದ ಸರಸ್ವತಿಯ ಮೂರ್ತಿಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪ್ರತಿಷ್ಠಾಪಿಸಲಾಯಿತು. ಜಲಪ್ರೋಕ್ಷಣೆ ಇತ್ಯಾದಿ ಕ್ರಿಯೆಗಳಿಂದ ಸ್ಥಾನವನ್ನು ಶುಚಿಗೊಳಿಸಿ, ಧ್ಯಾನ, ಆವಾಹನಾದಿ ಕ್ರಿಯೆಗಳಿಂದ ಸರಸ್ವತಿಯ ಪ್ರಾಣ ಪ್ರತಿಷ್ಠಾಪನೆ ಮಾಡಿ, ಪುಷ್ಪಗಳಿಂದ ಅರ್ಚಿಸಿ, ಸಂಕಲ್ಪದೊಂದಿಗೆ ಅಷ್ಟೋತ್ತರಪೂರ್ವಕ ಜಗನ್ಮಾತೆಯನ್ನು ಪೂಜಿಸಲಾಯಿತು. ಧೂಪ, ದೀಪ, ನೈವೇದ್ಯಾದಿಗಳನ್ನು ಅರ್ಪಿಸುವ ಮೂಲಕ ಪೂಜಿಸಲಾಯಿತು. ಮಹಾಮಂಗಳಾರತಿಯನ್ನು ಮಾಡಿ ಅಕ್ಷತೆಯೊಂದಿಗೆ ಮಹಾದೇವಿಗೆ ಪುಷ್ಪವನ್ನು ಸಮರ್ಪಿಸಲಾಯಿತು.

ಮಾನ್ಯ ಕುಲಪತಿಗಳಾದ ಡಾ॥ ಅಹಲ್ಯಾರವರು ಮಾತನಾಡುತ್ತಾ ಶ್ರೀಶಾರದಾ ದೇವಿಯನ್ನು ಪ್ರತಿಷ್ಠಾಪನೆ ಮಾಡಿದ್ದು ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಹಾಗೂ ವಿಶ್ವವಿದ್ಯಾಲಯದ ಉನ್ನತಿಗೋಸ್ಕರ ಎಂದರು. ಸರಸ್ವತಿಯು ವಿದ್ಯಾಧಿದೇವತೆಯಾಗಿರುವುದರಿಂದ ಎಲ್ಲರಿಗೂ ವಿದ್ಯೆಯು ದೊರಕಲಿ ವಿದ್ಯಾರ್ಥಿಗಳು ಚೆನ್ನಾಗಿ ಅಧ್ಯಯನ ಮಾಡಲಿ ಎಂದರು. ನಮ್ಮ ವಿಶ್ವವಿದ್ಯಾಲಯವೂ ವಿದ್ಯಾಕೇಂದ್ರವಾಗಿರುವುದರಿಂದ ವಿದ್ಯಾಧಿದೇವತೆಯಾದ ಸರಸ್ವತಿಯ ಮೂರ್ತಿಯ ಅವಶ್ಯಕತೆಯಿತ್ತು ಆದ್ದರಿಂದ ಜಗನ್ಮಾತೆಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ ಹಾಗೆಯೇ ಎಲ್ಲಾ ಕಾರ್ಯಗಳು ಸರಸ್ವತಿಯು ಸ್ಮರಣೆಯಿಂದಲೇ ನಿರ್ವಿಘ್ನವಾಗಿ ಆಗುವವು,

**ಸರಸ್ವತಿ ನಮಸ್ತುಭ್ಯಂ ವರದೇ ಕಾಮ ರೂಪಿಣೀ ।**
**ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥**

ಎಂಬುದಾಗಿ ಶಾರದೆಯನ್ನು ಸ್ಮರಿಸಿಯೇ ವಿದ್ಯಾಭ್ಯಾಸವನ್ನು ಆರಂಭಿಸುವುದು, ಅಕ್ಷರಾಭ್ಯಾಸ ಸಂದರ್ಭದಲ್ಲಿ ಸರಸ್ವತಿಯ ಸ್ಮರಣೆಯನ್ನು ಮಾಡಿಸುವಂತದ್ದು ಇದೆಲ್ಲವೂ ನಮ್ಮ ಸನಾತನ ವೈದಿಕ ಪರಂಪರೆಯಾಗಿದೆ. ವಿದ್ಯೆಯು ಒಲಿಯಬೇಕಾದರೆ ಸರಸ್ವತಿಯ

ಅನುಗ್ರಹವಿರಬೇಕು, ಶ್ರದ್ಧಾ, ಭಕ್ತಿ, ಭಯದಿಂದ ಅಧ್ಯಯನ ಮಾಡಿದರೆ ಆ ಶಾರದೆಯನ್ನು ವಶಪಡಿಸಿಕೊಳ್ಳಬಹು ಎಂದರು.

**ಯಾ ಕುಂದೇಂದು ತುಷಾರ ಹಾರ ಧವಲಾ**
**ಯಾ ಶುಭ್ರವಸ್ತ್ರಾನ್ವಿತಾ**
**ಯಾ ವೀಣಾ ವರದಂಡಮಂಡಿತಕರಾ ಯಾ**
**ಶ್ವೇತಪದ್ಮಾಸನಾ ।**
**ಯಾ ಬ್ರಹ್ಮಾಚ್ಯುತಶಂಕರಪ್ರಭೃತಿಭಿರ್ದೇವೈಃಸದಾ**
**ಪೂಜಿತಾ ಸಾ ಮಾಂ ಪಾತು ಸರಸ್ವತಿ ಭಗವತಿ**
**ನಿಃಶೇಷಜಾಡ್ಯಾಪಹಾ ॥**

ಎಂಬುದಾಗಿ ಅತ್ಯಂತ ಶುಭ್ರವಾದ ಹುಣ್ಣಿಮೆಯ ಚಂದ್ರನ ಕಾಂತಿಯಂತೆ ಕಂಗೊಳಿಸುವ, ಹಿಮದ ರಾಶಿಯಂತೆ(ವರ್ಣದ) ಹಾರವನ್ನು ಧರಿಸಿರುವ, ಪವಿತ್ರವಾದ ವಸ್ತ್ರವನ್ನು ದರಿಸಿರುವಂತಹ, ವೀಣೆಯನ್ನು ಕೈಯಲ್ಲಿ ಹಿಡಿದಿರುವಂತಹ, ಬಿಳಿಯದಾದ ಕಮಲದ ಮೇಲೆ (ಆಸೀನ ವಾಗಿರುವ)ಕುಳಿತಿರುವ, ಯಾವ ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ದೇವತೆಗಳಿಂದ ಪೂಜಿಸಲ್ಪಟ್ಟಿರುವ, ಆ ಮಹಾಮಾತೆಯಾದ ವಿದ್ಯಾಧಿದೇವತೆಯೂ ಆದ ಶಾರದಾ ದೇವಿಯೂ ನಮ್ಮನ್ನೆಲ್ಲ ಕಾಪಾಡಲಿ ಎಂಬುದಾಗಿ ಹೇಳುತ್ತಾ ಜಗನ್ಮಾತೆಯ ಅನುಗ್ರಹ ವಿಶ್ವವಿದ್ಯಾಲಯ ಹಾಗೂ ನಮ್ಮೆಲ್ಲರ ಮೇಲೆ ಇರಲಿ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಹಸ್ತಪ್ರತಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನಾಯಕ ನಾಮಣ್ಣವರ ಅವರು ಸರಸ್ವತಿಯನ್ನು ಕುರಿತು ವಿಶೇಷ ಉಪನ್ಯಾಸವನ್ನು ಮಾಡುತ್ತಾ **'ತೈಲಾದ್ ರಕ್ಷೇತ್ ಜಲಾದ್ ರಕ್ಷೇತ್..........'** ಎನ್ನುವ ಉಕ್ತಿಯನ್ನು ಪ್ರಸ್ತಾಪಿಸುತ್ತಾ ಸರಸ್ವತಿಯ ಮಹಿಮೆಯನ್ನು ಗುಣಗಾನ ಮಾಡಿದರು. ವೇದಾಂತ ನಿಕಾಯದ ಅಧ್ಯಕ್ಷರಾದ ಪ್ರೊ. ವೀರನಾರಾಯಣ ಪಾಂಡುರಂಗಿರವರು ಸರಸ್ವತಿಯನ್ನು ಕುರಿತು ಕೆಲವು ನುಡಿಗಳನ್ನು ನುಡಿದರು. ಪರೀಕ್ಷಾ ನಿಯಂತ್ರಕರಾದ ಡಾ. ರಾಮಕೃಷ್ಣ ಭಟ್ಟರವರು ಸರಸ್ವತಿಯ ಶ್ಲೋಕವನ್ನು ಕುರಿತು

**ಕಲ್ಯಾಣಿ ವೀಣಾರಮಣೀಯಪಾಣೇ**
**ಸಂಸ್ಕಾರದೇ ಪಾಲಯ ಶಾರದೇ ಮಾಮ್ ।**
**ವಿಶ್ವೇ ತವ ಸ್ನೇಹಮವಾಪ್ಯ ಧೀರೈಃ**
**ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥**

ಮಂಗಳಮಯಿ! ವೀಣೆಯನ್ನು ತಳೆದು ಚೆಲುಗೈಯುಳ್ಳವಳೆ! ಸಂಸ್ಕಾರವನ್ನು ನೀಡುವವಳೆ! ಶಾರದೆಯೇ! ನನ್ನನ್ನು ಕಾಪಾಡು. ಜಗತ್ತಿನಲ್ಲಿ ನಿನ್ನ ಸ್ನೇಹವನ್ನು(ವಾತ್ಸಲ್ಯ ಎಂಬ ತೈಲವನ್ನು) ಪಡೆದು ವಿದ್ವಾಂಸರು ಅರಿವಿನ ದೀಪವನ್ನು ಹಚ್ಚಿದ್ದಾರೆ ಎಂಬುದಾಗಿ ಶ್ಲೋಕದ ವ್ಯಾಖ್ಯಾನವನ್ನು ಮಾಡುತ್ತಾ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಧ್ಯೇಯವಾಕ್ಯವಾಗಿರುವ **"ಪ್ರಜ್ವಾಲಿತೋ ಜ್ಞಾನಮಯಃಪ್ರದೀಪಃ"** ಎಂಬುವ ಧ್ಯೇಯವಾಕ್ಯದ ಬಗ್ಗೆ ವಿವರಣೆ ನೀಡಿದರು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಬೋಧಕ ಹಾಗೂ ಬೋಧಕೇತರ ವೃಂದದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಹಿಳಾ ಸಿಬ್ಬಂದಿಗಳು ವಿಶೇಷ ವಸ್ತ್ರ(ಸೀರೆ)ವನ್ನು ಧರಿಸಿ ಪೂಜೆಯಲ್ಲಿ ಪಾಲ್ಗೊಂಡಿದ್ದು ಸಾಮೂಹಿಕವಾಗಿ ವಿಶೇಷವಾಗಿತ್ತು.

## ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ರಕ್ತದಾನ ಶಿಬಿರ




ದಿನಾಂಕ: 28.04.2023 ಶುಕ್ರವಾರದಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ವಿಕ್ಟೋರಿಯಾ ಹಾಸ್ಪಿಟಲ್ ವತಿಯಿಂದ ರಕ್ತದಾನವನ್ನು ಪಡೆಯಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ॥ ಅಹಲ್ಯಾರವರು ಮಾಡಿದರು. ಈ ಕಾರ್ಯಕ್ರಮದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ವ್ಯವಸ್ಥಾಪಕರು ಹಾಜರಿದ್ದರು.



ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಗಿರೀಶ್‌ಚಂದ್ರರವರು ಉಪಸ್ಥಿತರಿದ್ದರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಾಲಯ್ಯರವರು ಉಪಸ್ಥಿತರಿದ್ದರು, ರಾಷ್ಟ್ರೀಯ ಸ್ವಯಂ ಸೇವಾ ದಳದ ಸಂಯೋಜಕರಾದ ಡಾ. ಜಯರೇವಣ್ಣರವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಯೋಗವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ರಕ್ತದಾನವನ್ನು ಮಾಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಕೂಡ ರಕ್ತದಾನವನ್ನು ಮಾಡಿದರು.






ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನವನ್ನು ಮಾಡಿದರು. 10ಕ್ಕೂ ಹೆಚ್ಚು ಕಸಂವಿಯ ಸಿಬ್ಬಂದಿಗಳು ರಕ್ತದಾನವನ್ನು ಮಾಡಿದರು.

ಕಾರ್ಯಕ್ರಮದ ಸಮಾರೋಪದಲ್ಲಿ ಪ್ರೊ ಗಿರೀಶ್‌ಚಂದ್ರರವರು ಉಪಸ್ಥಿತರಿದ್ದು, ರಕ್ತದಾನವನ್ನು ಮಾಡುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.






KARNATAKA SAMSKRIT
NATIONAL
Victoria






केन्द्रीयसंस्कृतविश्वविद्यालयः, दिल्ली
६०तमी अखिलभारतीया शास्त्रीया स्पर्धा

Book-Post

ಇಂದ,
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪ ಮಹಾಕವಿ ರಸ್ತೆ, ಚಾಮರಾಮಪೇಟೆ
ಬೆಂಗಳೂರು – 560 018
ದೂರವಾಣಿ: 080–2670 1303 / 2670 5596

ಇವರಿಗೆ, ..............................................................

..............................................................

..............................................................

..............................................................

**Vartha Patram:** Quarterly news bulletin of **Karnataka Samskrit University,** Vol. 5, No. 4 Published by the **Registrar for Karnataka Samskrit University,** Pampamahakavi Road
Chamarajapete, Bengaluru - 560 018. Phone: 080-2670 1303, 2670 5596 and
Printed at The Xpressions Enterprises, ISRO Layout, Bangalore - 560 078. Mob: 89046 97308

ISSN 2347-9744

ಚಂದಾ ವಿವರ :
ಬಿಡಿ ಪ್ರತಿ ರೂ. 20–00
ವಾರ್ಷಿಕ ರೂ. 80–00
ತ್ರೈವಾರ್ಷಿಕ ರೂ. 240–00

(ಚಂದಾದಾರರು
ಪೋಸ್ಟಲ್ ಆರ್ಡರ್
ಅಥವಾ ಡಿ.ಡಿಯನ್ನಯ
ಹಣಕಾಸು ಅಧಿಕಾರಿಗಳು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು ಈ ಹೆಸರಿಗೆ
ಕಳುಹಿಸಿಕೊಡುವುದು)



